5	5–ಎನ್.ಇ.ಎಸ್. ಕ್ವಾಟರ್ಸ್	ಶ್ರೀಲಕ್ಷ್ಮೀ, ಹಳೇ ಎಸ್.ಬಿ.ಎಂ.ರಸ್ತೆ, ಫಕೀರ ವಾಡ ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಪಂಗಡ(ಮ)
6	6–ಸರ್.ಎಂ.ವಿ. ಬಡಾವಣೆ	ಹೇಮಂತ್ ಕುಮಾರ್ ಎನ್.ಟಿ, ಕೆ.ಆರ್.ಬಡಾವಣೆ ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ
7	7–ಸರ್.ಎಂ.ವಿ. ಬಡಾವಣೆ	ನಾಗರಾಜ ಎಂ. ವಿನಾಯಕ ನಗರ, 5ನೇ ಅಡ್ಡರಸ್ತೆ, ಸರ್.ಎಂ.ವಿ.ಬಡಾವಣೆ ಹೊಸಕೋಟೆ ಟೌನ್	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
8	8–ಸರ್.ಎಂ.ವಿ. ಬಡಾವಣೆ	ಜಯರಾಜ್ ಸಿ, ನಂ.131, 6ನೇ ಕ್ರಾಸ್, ತಮ್ಮೆಗೌಡ ಬಡಾವಣೆ, ಹೊಸಕೋಟೆ ಟೌನ್.	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
9	9–ಸರ್.ಎಂ.ವಿ. ಬಡಾವಣೆ	ರಾಜಣ್ಣ, 9ನೇ ವಾರ್ಡ್, ಕುರುಬರ ಪೇಟೆ, ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
10	10–ಸರ್.ಎಂ.ವಿ. ಬಡಾವಣೆ	ಬಿ.ನಾರಾಯಣಸ್ವಾಮಿ, 10ನೇ ವಾರ್ಡ್, ಗಣಗಲು ಪೂರ್ವ ಸರ್.ಎಂ.ವಿ.ಬಡಾವಣೆ, ಹೊಸಕೋಟೆ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ
11	11–ಬೆಸ್ತರಪೇಟೆ	ಎಸ್.ರವಿ, 11ನೇ ವಾರ್ಡ್, ತೇರುಬೀದಿ ಮೇಲಿನ ಪೇಟೆ, ಹೊಸಕೋಟೆ ಟೌನ್	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
12	12–ದೊಡ್ಡ ತಿಗಳರಪೇಟೆ	ಸುಶೀಲ, 12ನೇ ವಾರ್ಡ್, ಮೇಲಿನ ಪೇಟೆ, ಹೊಸಕೋಟೆ	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ (ಮ)
13	13–ನಾಲಗಲ್ಲಿ ಕಮ್ಮವಾರಿಪೇಟೆ	ಗಿರಿಜಮ್ಮ, 13ನೇ ವಾರ್ಡ್, ಕಮ್ಮವಾರಿ ಪೇಟೆ, ಮಾರಮ್ಮ ದೇವಸ್ಥಾನ, ಹೊಸಕೋಟೆ.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ (ಮ)
14	14–ದರ್ಜಿಪೇಟೆ ಕುಂಬಾರಪೇಟೆ	ಶ್ರೀಧರ್, 14ನೇ ವಾರ್ಡ್, ಕಿಲಾರಿ ಪೇಟೆ, ಆಂಜನೇಯ ದೇವಾಲಯ ಪಕ್ಕ, ಹೊಸಕೋಟೆ.	ಪಕ್ಷೇತರರು	ಸಾಮಾನ್ಯ
15	15–ಅರಳೇಪೇಟೆ ಕುರುಬರಪೇಟೆ	ರಾಧ, 15ನೇ ವಾರ್ಡ್, ಅರಳೇಪೇಟೆ, ಹೊಸಕೋಟೆ ಟೌನ್.	ಭಾರತೀಯ ಜನತಾ ಪಾರ್ಟಿ	ಹಿಂದುಳಿದ ವರ್ಗ ಬಿ (ಮ)
16	16–ಕುರುಬರಪೇಟೆ	ಪಾರ್ವತಿ, 16ನೇ ವಾರ್ಡ್, ತೇರುಬೀದಿ ರಸ್ತೆ, ಕುರುಬರಪೇಟೆ, ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ (ಮ)
17	17–ಪಕೀರವಾಡ ರಜಪುತರಪೇಟೆ	ಗುಲಾಬ್ ಜಾನ್ ಕೋಂ ಷಫಿ ಉಲ್ಲಾ ಖಾನ್, ಮಟನ್ ಮಾರ್ಕೆಟ್, ಹೊಸಕೋಟೆ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ (ಮ)
18	18–ಷರಾಬ್ ಮುನಿಶಾಮಯ್ಯ ಬಡಾವಣೆ	ರಶ್ಮಿ ಕೋಂ ಪ್ರತಿಬ್ ಬಾಬು, ಷರಾಬ್ ಮುನಿಶ್ಯಾಮಯ್ಯ ಬಡಾವಣೆ, ಹೊಸಕೋಟೆ ಟೌನ್	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ (ಮ)
19	19–ಗೌತಮ್ ಕಾಲೋನಿ	ಎಂ.ಶಿವಪ್ಪ(ಶಿವಾನಂದ), ಬಿನ್ ಮುನಿಯಪ್ಪ, ಸರ್.ಎಂ.ವಿ.ಬಡಾವಣೆ, ಹೊಸಕೋಟೆ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ
20	20–ಎ.ಆರ್. ಬಡಾವಣೆ	ಹೆಚ್.ಖಾದಿರ್ ಅಹಮ್ಮದ್ ಬಿನ್ ಹೆಚ್.ಕೆ.ಮಹಮದ್ ಅಜೀಜ್, ಗಾಣಿಗರ ಪೇಟೆ, ಹೊಸಕೋಟೆ.	ಭಾರತಿಯ ಜನತಾ ಪಾರ್ಟಿ	ಹಿಂದುಳಿದ ವರ್ಗ ಎ
21	21–ಡಾ. ಅಂಬೇಡ್ಕರ್ ಕಾಲೋನಿ	ಟಿ.ಸಿ.ರತ್ನಮ್ಮ ಕೋಂ ವಿಷ್ಣುಪ್ರಸಾದ್ ಹೆಚ್.ಪಿ., ಡಾ.ಅಂಬೇಡ್ಕರ್ ಕಾಲೋನಿ, ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ (ಮ)
22	22–ಕಾಜೀಮೊಹಲ್ಲಾ ವರದಾಪುರ	ಆರ್ಮುಗಂ ಬಿನ್ ಸುಬ್ರಮಣಿ, ಡಾ.ಅಂಬೇಡ್ಕರ್ ಕಾಲೋನಿ, ಹೊಸಕೋಟೆ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ
23	23–ದಂಡುಪಾಳ್ಯ ಸಿದ್ಧಾರ್ಥನಗರ	ನಾಗರಾಜ ಡಿ.ಕೆ. ಬಿನ್ ಕೃಷ್ಣಪ್ಪ, ದಂಡುಪಾಳ್ಯ, ಹೊಸಕೋಟೆ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ

ಪಿ. ಹೇಮಲತಾ
ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – III Part – III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪) Bangalore, Thursday, March 28, 2013 (Chaithra 7, Shaka Varsha 1934)	ನಂ.೬೪೫ No. 645

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಅಧಿಸೂಚನೆ

ನಂ.ಇಎಲ್ಎನ್(ಪಂ)ಸಿಆರ್.20/2012–13, ಬೆಂಗಳೂರು, ದಿನಾಂಕ: 28–03–2013

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 17 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 8ರನ್ವಯ ಹೊರಡಿಸಲಾದ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಇಎಲ್ಎನ್(ಪಂ) ಸಿಆರ್.8/2012–13, ದಿನಾಂಕ:16–02–2013ರ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರ ಪುರಸಭೆಗೆ ವಿವಿಧ ವಾರ್ಡ್‌ಗಳಿಂದ ಚುನಾಯಿತ ಸದಸ್ಯರನ್ನು ತುಂಬಲು ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿದ್ದು, ಸದರಿ ಚುನಾವಣೆಯ ಫಲಿತಾಂಶವನ್ನು ಸಂಬಂಧಪಟ್ಟ ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ.

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 20 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 66ರನ್ವಯ ಪ್ರಕಾರ ಜಿಲ್ಲಾಧಿಕಾರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಪಿ.ಹೇಮಲತಾ, ಭಾ.ಆ.ಸೇ., ಆದ ನಾನು **ವಿಜಯಪುರ ಪುರಸಭೆಗೆ** ಹೊಸದಾಗಿ ಆಯ್ಕೆಯಾದ ಸದಸ್ಯರುಗಳ (ಕೌನ್ಸಿಲರ್‌ಗಳ) ಹೆಸರುಗಳನ್ನು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಿರುತ್ತೇನೆ.

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	2	3	4	5
1	1–ಅಶೋಕ ನಗರ	ಭಾರತಿ ಕೋಂ ಮುನಿಕೃಷ್ಣಪ್ಪ, ನಂ.175, 2ನೇ ವಾರ್ಡ್, 2ನೇ ಅಡ್ಡರಸ್ತೆ, ಅಶೋಕ ನಗರ, ವಿಜಯಪುರ.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ (ಮ)
2	2–ಜೆ.ಸಿ.ಬಡಾವಣೆ	ಬಾಸ್ಕರ್ ಎಸ್. ಬಿನ್ ಕೆ.ಎಲ್.ಶಾಮಣ್ಣ, ವಿಜಯಪುರ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಬಿ
3	3–ಭಾರತ್ ನಗರ	ಜಬೀನ್ ತಾಜ್ ಕೋಂ ಅಸ್ಲಾಂಪಾಷ, ನಂ.530, ಭಾರತ್ ನಗರ, ವಿಜಯಪುರ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ (ಮ)
4	4–ಶಿಡ್ಲಘಟ್ಟ ಡೀವಿಯೇಷನ್ ರಸ್ತೆ	ಎನ್.ಮುನಿಚೆನ್ನಪ್ಪ ಬಿನ್ ಸಿ.ನಾರಾಯಣಪ್ಪ, ಮಾರುತಿ ನಗರ, ಚಿಕ್ಕಬಳ್ಳಾಪುರ ರಸ್ತೆ, ವಿಜಯಪುರ ಟೌನ್,	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
5	5–ರೆಡ್ಡಿ ಬೀದಿ	ಟಿ.ಎಸ್.ವಿಜಯಕುಮಾರ್ ಬಿನ್ ಟಿ.ಶಾಮಣ್ಣ, ನಂ.337, ಕೇಶವಸ್ವಾಮಿ ದೇವಸ್ಥಾನದ ಹಿಂಭಾಗ ರೆಡ್ಡಿ ಬೀದಿ, ವಿಜಯಪುರ ಟೌನ್,	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
6	6–ಕೇಶವಸ್ವಾಮಿ ದೇವಸ್ಥಾನದ ರಸ್ತೆ	ಮಂಜುನಾಥ್ ಆರ್.ಸಿ. ಬಿನ್ ಆರ್.ಚಿಕ್ಕರುದ್ರಪ್ಪ, ನಂ.1164, ಕೇಶವ ಕೃಪ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
7	7–ಕೋಟೆ ಬೀದಿ	ಸತೀಶ್ ಕುಮಾರ್ ಎಂ. ಬಿನ್ ಎಂ.ಮಾಳಿಗಪ್ಪ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
8	8–ಮಾರ್ಕೆಟ್ ಬೀದಿ	ಪದ್ಮಾವತಿ ಕೋಂ ಎನ್.ರಾಜಗೋಪಾಲ್, ರಾಮಮಂದಿರ ಬೀದಿ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ (ಮ)
9	9–ಮಂಡಿಬೆಲೆ ರಸ್ತೆ	ಅನುಸೂಯಮ್ಮ ಕೋಂ ಸಂಪತ್‌ಕುಮಾರ್, ಮಂಡಿಬೆಲೆ ರಸ್ತೆ, ವಿಜಯಪುರ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಪಂಗಡ (ಮ)
10	10–ಬಲಜಿಗರ ಬೀದಿ	ಎಂ.ವರದರಾಜು ಬಿನ್ ವಿ.ಮುನಿಶಾಮಪ್ಪ, ಬಲಜಿಗರ ಬೀದಿ, ದೂರವಾಣಿ ಕಛೇರಿ ಹಿಂಭಾಗದ ರಸ್ತೆ, ವಿಜಯಪುರ ಟೌನ್.	ಪಕ್ಷೇತರರು	ಸಾಮಾನ್ಯ

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	2	3	4	5
11	11–ಅರಳೇಪೇಟೆ	ಎಂ.ಕೇಶವಪ್ಪ ಬಿನ್ ದೊಡ್ಡಮುನಿಲಕ್ಕ್ಮಯ್ಯ, ನಂ.369, ಶ್ರೀಧರ್ಮರಾಯಸ್ವಾಮಿ ಗುಡಿ ಬೀದಿ, ವಿಜಯಪುರ ಟೌನ್.	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ
12	12–ದುರ್ಗಾತಾಯಿ ದೇವಸ್ಥಾನದ ಬೀದಿ	ಕೆ.ವಿ.ಅರುಣ ಕೋಂ ಡಿ.ಎನ್.ತಿರುಮಲೇಶ್, ಹರಿಜನ ಕಾಲೋನಿ, ಶ್ರೀ ದುರ್ಗಾತಾಯಿ ದೇವಸ್ಥಾನದ ಬೀದಿ, ವಾರ್ಡ್ ನಂ.12, ವಿಜಯಪುರ ಟೌನ್.	ಪಕ್ಷೇತರರು	ಪರಿಶಿಷ್ಟ ಜಾತಿ (ಮ)
13	13–ಗಂಗಾತಾಯಿ ದೇವಸ್ಥಾನದ ರಸ್ತೆ	ನಿಸ್ಸಾರ್ ಬಿನ್ ಸತ್ತಾರ್ ಸಾಬ್, ನಂ.2815, ಗಂಗಾತಾಯಿ ದೇವಸ್ಥಾನ ರಸ್ತೆ, 13ನೇ ವಾರ್ಡ್, ವಿಜಯಪುರ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ
14	14–ಸುಣ್ಣಕಲ್ಲು ಗೂಡು ಬೀದಿ	ಜೆ.ಎನ್.ಶ್ರೀನಿವಾಸ್ ಬಿನ್ ಜೆ.ವಿ.ನಾರಾಯಣಪ್ಪ, ಯಲ್ಲಮ್ಮ ಗುಡಿ ಬೀದಿ, ವಿಜಯಪುರ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
15	15–ತಾತಯ್ಯನವರ ಮಠದ ರಸ್ತೆ	ಗೀತಾ ಕೋಂ ರಾಮಚಂದ್ರಪ್ಪ, ಸುಣ್ಣಕಲ್ಲು ಬೀದಿ, ವಿಜಯಪುರ ಟೌನ್.	ಪಕ್ಷೇತರರು	ಸಾಮಾನ್ಯ (ಮ)
16	16–ಸತ್ಯಮ್ಮ ಕಾಲೋನಿ	ಎಂ.ನಾಗರಾಜು ಬಿನ್ ಮುನಿಯಪ್ಪ, ಯಲುವಹಳ್ಳಿ ರಸ್ತೆ, ಇಂದಿರಾ ನಗರ, 2ನೇ ಕ್ರಾಸ್, ವಿಜಯಪುರ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ
17	17–ಸೂಲಾಲ್ ದಿನ್ನೆ	ಗೌಸ್ ಖಾನ್ ಬಿನ್ ಅಜೀಜ್ ಖಾನ್, ದುರ್ಗಾ ಮೊಹಲ್ಲಾ, ಗುರಪ್ಪನ ಮಠದ ರಸ್ತೆ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ
18	18–ಶಾಂತಿ ನಗರ	ಜಿ.ಶ್ರೀನಿವಾಸಮೂರ್ತಿ ಬಿನ್ ಗೋಪಾಲಪ್ಪ, ಆನಂದನಗರ, ವಾರ್ಡ್ ನಂ.18, 1ನೇ ಅಡ್ಡರಸ್ತೆ, ವಿಜಯಪುರ ಟೌನ್	ಪಕ್ಷೇತರರು	ಸಾಮಾನ್ಯ
19	19–ದರ್ಗಾ ಮೊಹಲ್ಲಾ	ವಿ.ಎಂ.ನಾಗರಾಜ ಬಿನ್ ವಿ.ಎಂ.ಮುನಿಶಾಮಿಗೌಡ, ನಂ.122, ಗುರಪ್ಪನ ಮಠ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
20	20–ಇಂದಿರಾ ನಗರ	ವಿಜಯರಾಣಿ ಕೋಂ ವೀರಭದ್ರಯ್ಯ, ವಾರ್ಡ್ ನಂ.20, ಇಂದಿರಾ ನಗರ, ವಿಜಯಪುರ ಟೌನ್.	ಪಕ್ಷೇತರರು	ಹಿಂದುಳಿದ ವರ್ಗ ಬಿ (ಮ)
21	21–ಗುರಪ್ಪಮಠ	ಎನ್.ಮಹೇಶ್ ಬಿನ್ ಲೇಟ್ ನಾರಾಯಣಸ್ವಾಮಿ, ಗುರಪ್ಪನ ಮಠ ಮುಖ್ಯ ರಸ್ತೆ, ವಾರ್ಡ್ ನಂ.19, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ
22	22–ಮೆಹಬೂಬ್‌ನಗರ	ರಿಜ್ವಾನಾ ಕೌಸರ್ ಏಜಾಜ್ ಕೋಂ ಮಹಮದ್ ಏಜಾಜ್, ಮೆಹಬೂಬ್ ನಗರ, ವಿಜಯಪುರ ಟೌನ್,	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ (ಮ)
23	23–ರಹಮತ್ ನಗರ	ಸಬೀಹಾ ಹನೀಫ್ ಕೋಂ ಎ.ಆರ್.ಹನೀಪುಲ್ಲಾ, ನಂ.3369, ದರ್ಗಾ ಮೊಹಲ್ಲಾ, ಗುರಪ್ಪನ ಮಠ ರಸ್ತೆ, ವಿಜಯಪುರ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ (ಮ)

ಪಿ. ಹೇಮಲತಾ
ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಶೇಷ ರಾಜ್ಯ ಪತ್ರಿಕೆ

ಭಾಗ - III Part - III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪) Bangalore, Thursday, March 28, 2013 (Chaithra 7, Shaka Varsha 1934)	ನಂ. ೬೪೬ No. 646

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಅಧಿಸೂಚನೆ

ನಂ.ಇಎಲ್‌ಎನ್(ಪಂ)ಸಿಆರ್.20/2012-13, ಬೆಂಗಳೂರು, ದಿನಾಂಕ:28-03-2013

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 17 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 8ರನ್ವಯ ಹೊರಡಿಸಲಾದ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಇಎಲ್‌ಎನ್(ಪಂ) ಸಿಆರ್.8/2012-13, ದಿನಾಂಕ:16-02-2013ರ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪುರಸಭೆಗೆ ವಿವಿಧ ವಾರ್ಡ್‌ಗಳಿಂದ ಚುನಾಯಿತ ಸದಸ್ಯರನ್ನು ತುಂಬಲು ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿದ್ದು, ಸದರಿ ಚುನಾವಣೆಯ ಫಲಿತಾಂಶವನ್ನು ಸಂಬಂಧಪಟ್ಟ ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ.

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 20 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 66ರನ್ವಯ ಪ್ರಕಾರ ಜಿಲ್ಲಾಧಿಕಾರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಪಿ.ಹೇಮಲತಾ, ಭಾ.ಆ.ಸೇ., ಆದ ನಾನು **ದೇವನಹಳ್ಳಿ ಪುರಸಭೆಗೆ** ಹೊಸದಾಗಿ ಆಯ್ಕೆಯಾದ ಸದಸ್ಯರುಗಳ (ಕೌನ್ಸಿಲರ್‌ಗಳ) ಹೆಸರುಗಳನ್ನು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಿರುತ್ತೇನೆ.

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	3	4	5	5
1	1-ಕೊರಚರ ಬೀದಿ	ಎಂ.ನಾರಾಯಣಸ್ವಾಮಿ ಬಿನ್ ಮಾರಪ್ಪ, ತಾಲ್ಲೂಕು ಕಛೇರಿ ಹಿಂಭಾಗ, ಗೋರಿಪಾಳ್ಯ, ವಾರ್ಡ್ ನಂ.01, ದೇವನಹಳ್ಳಿ.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ
2	2-ಪೂಜಮ್ಮನ ಪಾಳ್ಯ	ಎಂ.ಆಶಾರಾಣಿ ಕೋಂ ಪ್ರಕಾಶ್, ಪಟೇಲ್ ಶೆಟ್ಟಪ್ಪ ಬೀದಿ, 3ನೇ ವಾರ್ಡ್, ದೇವನಹಳ್ಳಿ.	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಎ (ಮ)
3	3-ಜೊಳ್ಳಪ್ಪನವರ ಬೀದಿ	ಎಂ.ಸೋಮಶೇಖರ ಉರುಫ್ ಬಾಬು ಬಿನ್ ಲೇ. ಮುನಿಕೃಷ್ಣಪ್ಪ, ಸಿಲಿಕಾನ್ ಬಡಾವಣೆ, ಪ್ರಸನ್ನಹಳ್ಳಿ ರಸ್ತೆ, ದೇವನಹಳ್ಳಿ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಬಿ
4	4-ಗರಡಿ ಬೀದಿ	ಬಿ.ದೇವರಾಜ ಬಿನ್ ಭೈರಪ್ಪ, ಗ್ರಂಥಿಗೆ ಪಿಳ್ಳಣ್ಣ ಬೀದಿ, 4ನೇ ವಾರ್ಡ್, ದೇವನಹಳ್ಳಿ	ಪಕ್ಷೇತರರು	ಸಾಮಾನ್ಯ
5	5-ಯಲಹಂಕ ಬೀದಿ	ರತ್ನಮ್ಮ ಕೋಂ ರವಿಕುಮಾರ, ವಾರ್ಡ್ ನಂ.15, ಜಾಲಪತಿ ಬೀದಿ, ದೇವನಹಳ್ಳಿ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಹಿಂದುಳಿದ ವರ್ಗ ಬಿ (ಮ)
6	6-ಗಾಣಿಗರ ಬೀದಿ	ಎನ್.ರಘು ಲೇಟ್ ಎಸ್.ನರಸಿಂಹಯ್ಯ, ಪ್ರಶಾಂತನಗರ, ಬೂದಿಗೆರೆ ರಸ್ತೆ, ಎಸ್.ಎನ್.ಲೇಔಟ್, 22ನೇ ವಾರ್ಡ್, ದೇವನಹಳ್ಳಿ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ
7	7-ಕೋಟೆ ಎಡಭಾಗ	ಶಾರದಮ್ಮ ಕೋಂ ವೆಂಕಟೇಶ್, ನಾಯಕರ ಬೀದಿ, 7ನೇ ವಾರ್ಡ್, ಕೋಟೆ, ದೇವನಹಳ್ಳಿ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಪಂಗಡ (ಮ)
8	8-ಕೋಟೆ ಬಲಭಾಗ	ವಿ.ಗೋಪಾಲಕೃಷ್ಣ ಬಿನ್ ಜಿ.ಕೆ.ವೆಂಕಟ ರಮಣಪ್ಪ, ಧರ್ಮರಾಯ ಸ್ವಾಮಿ ಗುಡಿ ಬೀದಿ, ವಾರ್ಡ್ ನಂ.8, ದೇವನಹಳ್ಳಿ.	ಪಕ್ಷೇತರರು	ಹಿಂದುಳಿದ ವರ್ಗ ಎ
9	9-ಸವರದವರ ಬೀದಿ	ವಿ.ಗೋಪಾಲ್ ಬಿನ್ ವೆಂಕಟರಾಯಪ್ಪ, ಮರಳುಬಾಗಿಲು, 9ನೇ ವಾರ್ಡ್, ದೇವನಹಳ್ಳಿ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ
10	10-ನೀಲೇರಿ	ಭಾಗ್ಯಮ್ಮ ಕೋಂ ವಿ.ಸೋಮಶೇಖರ, ನೀಲೇರಿ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು	ಜನತಾದಳ (ಜಾತ್ಯಾತೀತ)	ಸಾಮಾನ್ಯ (ಮ)
11	11-ಅಚಲ ಮಂದಿರ	ಶಾಂತಮ್ಮ ಕೋಂ ಬಿ.ವಿ.ಕೃಷ್ಣಾರೆಡ್ಡಿ, ಮರಳುಬಾಗಿಲು. ಪರ್ವತಪುರ ರಸ್ತೆ, ದೇವನಹಳ್ಳಿ	ಜನತಾದಳ (ಜಾತ್ಯಾತೀತ)	ಸಾಮಾನ್ಯ (ಮ)

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	3	4	5	5
12	12–ಮರಳು ಬಾಗಿಲು ಹರಿಜನ ಕಾಲೋನಿ	ಜಿ.ಎ.ರವೀಂದ್ರ ಬಿನ್ ಜಿ.ಕೆ. ಅಶ್ವಥ್‌ನಾರಾಯಣ್, 12ನೇ ವಾರ್ಡ್, ಗುಟ್ಟಹಳ್ಳಿ ವೀರಪ್ಪನವರ ಬೀದಿ, ಮರಳುಬಾಗಿಲು, ದೇವನಹಳ್ಳಿ ಟೌನ್.	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ
13	13–ಮರಳು ಬಾಗಿಲು ಕುಂಬಾರ ಬೀದಿ	ಎಂ.ಕುಮಾರ್ ಬಿನ್ ಎ.ಮುನಿಶಾಮಪ್ಪ, 13ನೇ ವಾರ್ಡ್, ಕುಂಬಾರ ಬೀದಿ, ದೇವನಹಳ್ಳಿ ಟೌನ್.	ಜನತಾದಳ (ಜಾತ್ಯಾತೀತ)	ಸಾಮಾನ್ಯ
14	14–ಮಹಂತಿ ಮಠ	ವೈ.ಸಿ.ಸತೀಶ್ ಕುಮಾರ್ ಬಿನ್ ವೈ.ಸಿ.ಚನ್ನರಸಪ್ಪ, 14ನೇ ವಾರ್ಡ್, ನಗರ್ತರ ಬೀದಿ, ದೇವನಹಳ್ಳಿ ಟೌನ್	ಪಕ್ಷೇತರರು	ಸಾಮಾನ್ಯ
15	15–ಕಾಳಮ್ಮ ದೇವಸ್ಥಾನ ಬೀದಿ	ಆರ್.ಕೆ..ಪದ್ಮಾವತಿ ಕೋಂ ಸಿ.ಜಗನ್ನಾಥ್, ವಾರ್ಡ್ ನಂ.5, ಸಿ.ಎಂ.ಮಹಲ್, ಯಲಹಂಕ ಬೀದಿ, ದೇವನಹಳ್ಳಿ ಟೌನ್	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಸಾಮಾನ್ಯ (ಮ)
16	16–ಅಂಬೇಡ್ಕರ್ ಕಾಲೋನಿ	ಎಂ.ಮೂರ್ತಿ ಬಿನ್ ಲೇ॥ ಮುನಿಪೋತಲಯ್ಯ, ನಂ.186, ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿ, ದೇವನಹಳ್ಳಿ ಟೌನ್.	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಪರಿಶಿಷ್ಟ ಜಾತಿ
17	17–ದಾಸರ ಬೀದಿ	ಜಿ.ಎನ್.ವೇಣುಗೋಪಾಲ್ ಬಿನ್ ಲೇಟ್ ನಾರಾಯಣಸ್ವಾಮಿ, ವಾರ್ಡ್ ನಂ.6, ಗಾಣಿಗರ ಬೀದಿ, ದೇವನಹಳ್ಳಿ	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಸಾಮಾನ್ಯ
18	18–ಗಂಗಮ್ಮ ದೇವರ ಬೀದಿ	ಮಂಜುನಾಥ್ ಬಿನ್ ಚಿಕ್ಕಮುನಿಯಪ್ಪ, ನಂ.81, ವೇಣುಗೋಪಾಲಸ್ವಾಮಿ ರಸ್ತೆ, ವಾರ್ಡ್ ನಂ.18, ದೇವನಹಳ್ಳಿ.	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಹಿಂದುಳಿದ ವರ್ಗ ಎ
19	19–ಚನ್ನರಾಯಪಟ್ಟಣ ರಸ್ತೆ ಎಡಭಾಗ	ಲಕ್ಷ್ಮಿ ಕೋಂ ವೆಂಕಟೇಶ್, ವಾರ್ಡ್ ನಂ.12, ಮರಳು ಬಾಗಿಲು, ದೇವನಹಳ್ಳಿ.	ಪಕ್ಷೇತರರು	ಪರಿಶಿಷ್ಟ ಜಾತಿ (ಮ)
20	20–ಚನ್ನರಾಯಪಟ್ಟಣ ರಸ್ತೆ ಬಲಭಾಗ	ಎಸ್.ಪುಷ್ಪ ಕೋಂ ಎನ್.ರವಿಕುಮಾರ್, ವಾರ್ಡ್ ನಂ.19, ಚನ್ನರಾಯಪಟ್ಟಣ ರಸ್ತೆ, ಪುಟ್ಟಪ್ಪನ ಗುಡಿ ಬೀದಿ, ದೇವನಹಳ್ಳಿ.	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಹಿಂದುಳಿದ ವರ್ಗ ಎ (ಮ)
21	21–ಮದಗಲಮ್ಮ ಗುಡಿ ಬೀದಿ	ಹೆಚ್.ಎಂ.ಗಾಯಿತ್ರಿ ಕೋಂ ಡಿ.ಎಂ. ಶ್ರೀರಾಮ, ಶ್ರೀ ಮದಗಲಮ್ಮ ಗುಡಿ ಬೀದಿ, ವಾರ್ಡ್ ನಂ.21, ಡಾ॥ ಬಿ.ಆರ್. ಅಂಬೇಡ್ಕರ್ ಕಾಲೋನಿ, ದೇವನಹಳ್ಳಿ ಟೌನ್.	ಜನತಾದಳ (ಜಾತ್ಯಾತೀತ)	ಪರಿಶಿಷ್ಟ ಜಾತಿ (ಮ)
22	22–ಪ್ರಶಾಂತ ನಗರ	ನರಸಿಂಹಮೂರ್ತಿ ಬಿನ್ ಮುನಿಮಾರಪ್ಪ, ಶ್ರೀ ಮದಗಲಮ್ಮ ಗುಡಿ ಬೀದಿ, ವಾರ್ಡ್ ನಂ.16, ದೇವನಹಳ್ಳಿ ಟೌನ್.	ಜನತಾದಳ (ಜಾತ್ಯಾತೀತ)	ಪರಿಶಿಷ್ಟ ಜಾತಿ
23	23–ಅಕ್ಕುಪೇಟೆ	ಎನ್.ಶಶಿಕುಮಾರ ಬಿನ್ ಸಿ.ನಾರಾಯಣ ಸ್ವಾಮಿ, ಅಕ್ಕುಪೇಟೆ, ವಾರ್ಡ್ ನಂ.23, ದೇವನಹಳ್ಳಿ ಟೌನ್	ಜನತಾದಳ (ಜಾತ್ಯಾತೀತ)	ಸಾಮಾನ್ಯ

ಪಿ. ಹೇಮಲತಾ
ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪)	ನಂ. ೬೪೭
Part – III	Bangalore, Thursday, March 28, 2013 (Chaithra 7, Shaka Varsha 1934)	No. 647

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಅಧಿಸೂಚನೆ

ನಂ.ಇಎಲ್‌ಎನ್(ಪಂ)ಸಿಆರ್.20/2012–13, ಬೆಂಗಳೂರು, ದಿನಾಂಕ:28–03–2013

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 17 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 8ರನ್ವಯ ಹೊರಡಿಸಲಾದ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಇಎಲ್‌ಎನ್(ಪಂ) ಸಿಆರ್.8/2012–13, ದಿನಾಂಕ:16–02–2013ರ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರಸಭೆಗೆ ವಿವಿಧ ವಾರ್ಡ್‌ಗಳಿಂದ ಚುನಾಯಿತ ಸದಸ್ಯರನ್ನು ತುಂಬಲು ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿದ್ದು, ಸದರಿ ಚುನಾವಣೆಯ ಫಲಿತಾಂಶವನ್ನು ಸಂಬಂಧಪಟ್ಟ ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ.

ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 20 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ (ಎಲೆಕ್ಷನ್ ಆಫ್ ಕೌನ್ಸಿಲರ್ಸ್) ನಿಯಮಗಳು 1977ರ ನಿಯಮ 66ರನ್ವಯ ಪ್ರಕಾರ ಜಿಲ್ಲಾಧಿಕಾರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಪಿ.ಹೇಮಲತಾ, ಭಾ.ಆ.ಸೇ., ಆದ ನಾನು **ದೊಡ್ಡಬಳ್ಳಾಪುರ ನಗರಸಭೆಗೆ** ಹೊಸದಾಗಿ ಆಯ್ಕೆಯಾದ ಸದಸ್ಯರುಗಳ (ಕೌನ್ಸಿಲರ್‌ಗಳ) ಹೆಸರುಗಳನ್ನು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಿರುತ್ತೇನೆ.

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	2	3	4	5
1	1–ಸೋಮೇಶ್ವರ ಬಡಾವಣೆ	ಎ.ನಂಜಪ್ಪ (ಕಂಬಿ), ನಂ.2261, ಕಛೇರಿಪಾಳ್ಯ, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಪರಿಶಿಷ್ಟ ಜಾತಿ
2	2–ಗಂಗಾಧರಪುರ	ಆರ್.ಕೆಂಪರಾಜು, ಗಂಗಾಧರಪುರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
3	3–ಡಿ.ಕ್ರಾಸ್	ಜಿ.ಪ್ರಕಾಶ್, ಮುತ್ಸಂದ್ರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
4	4–ವಿನಾಯಕನಗರ	ಮಮತಾಶ್ರೀ ನಾರಾಯಣಸ್ವಾಮಿ, ನಂ.2538/1, ರೋಜಿಪುರ, 2ನೇ ಡಿವಿಜನ್, ದೊಡ್ಡಬಳ್ಳಾಪುರ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಪರಿಶಿಷ್ಟ ಜಾತಿ (ಮ)
5	5–ಸಿದ್ದೇನಾಯಕನಹಳ್ಳಿ	ಜೆ.ಆಂಜಿನಪ್ಪ, ನಂ.2667/8, ಚಿಕ್ಕಪೇಟೆ, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಹಿಂದುಳಿದ ವರ್ಗಎ
6	6–ಖಾಸ್‌ಬಾಗ್	ಎಂ.ಮಲ್ಲೇಶ್, ನಂ.343, ಕೆಂಪೇಗೌಡ ನಗರ, ಮುತ್ತೂರು, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
7	7–ದರ್ಗಾಪುರ	ಕೆ.ಬಿ.ಮುದ್ದಪ್ಪ, ನಂ.68, ಖಾಸ್‌ಬಾಗ್, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಹಿಂದುಳಿದ ವರ್ಗ ಎ
8	8–ವಹ್ನಿಗರಪೇಟೆ	ಸೌಭಾಗ್ಯ ಸಂಜೀವನಾಯಕ, ನಂ.2, ರಂಗಪ್ಪ ವೃತ್ತ, ದೊಡ್ಡಬಳ್ಳಾಪುರ	ಕನ್ನಡ ಪಕ್ಷ	ಪರಿಶಿಷ್ಟ ಪಂಗಡ (ಮ)
9	9–ಸಂಜಯನಗರ	ಸುಶೀಲಮ್ಮ ಕೊಂ ಮೋಹನಕುಮಾರ್ ನಂ.802, ಸಂಜಯನಗರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ (ಮ)
10	10–ವೀರಭದ್ರನಪಾಳ್ಯ	ಕೆ.ಸಿ.ಭಾಗ್ಯ ಚೌಡರಾಜ್ ಕೋಂ ಡಿ.ಸಿ ಚೌಡರಾಜ್, ನಂ.759, ವೀರಭದ್ರನಪಾಳ್ಯ, ದೊಡ್ಡಬಳ್ಳಾಪುರ	ಪಕ್ಷೇತರರು	ಹಿಂದುಳಿದ ವರ್ಗ ಎ (ಮ)
11	11–ಕರೇನಹಳ್ಳಿ (ಕಾಳಿದಾಸ ನಗರ)	ಡಿ.ಎಂ.ಚಂದ್ರಶೇಖರ್ (ಚಂದ್ರಿ), ನಂ.2307, ಅನಕೃ ರಸ್ತೆ, ತ್ಯಾಗರಾಜನಗರ, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
12	12–ಕನಕದಾಸ ನಗರ	ಹೆಚ್.ಎಸ್.ಶಿವಶಂಕರ (ಶಂಕ್ರಿ), ನಂ.1866/1, 12ನೇ ಡಿವಿಷನ್, ದೇವರಾಜನಗರ, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
13	13–ಭುವನೇಶ್ವರಿನಗರ	ಎನ್.ಮಂಜುಳಾ ಕೋಂ ಡಿ.ಪಿ.ಆಂಜನೇಯ, ಕುಚ್ಚಪ್ಪನಪೇಟೆ, ಅರಳುಮಲ್ಲಿಗೆ ಬಾಗಿಲು ಸರ್ಕಾರಿ ಶಾಲೆಯ ಮುಂಭಾಗ, ದೊಡ್ಡಬಳ್ಳಾಪುರ	ಪಕ್ಷೇತರರು	ಸಾಮಾನ್ಯ (ಮ)
14	14–ನೇಯ್ಗೆ ಬೀದಿ	ಟಿ.ಎನ್.ಪ್ರಭುದೇವ ಬಿನ್ ನರಸಿಂಹ ಮೂರ್ತಿ ಉ॥ ಪಾಪಣ್ಣ, ನಂ.752, ಕೋಟೆ ರಸ್ತೆ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
15	15–ಚೌಡೇಶ್ವರಿಗುಡಿಬೀದಿ	ಸಿ.ಜಯಲಕ್ಷ್ಮೀ ಕೋಂ ಎ.ನಟರಾಜು, 367/296, ತೂಬಗೆರೆ ಪೇಟೆ, ವನ್ನಿಗರ ಪೇಟೆ, ಟ್ಯಾಂಕ್ ರಸ್ತೆ, ದೊಡ್ಡಬಳ್ಳಾಪುರ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್	ಸಾಮಾನ್ಯ (ಮ)
16	16–ಕಲಾಸಿಪಾಳ್ಯ	ಎಂ.ಶಿವಕುಮಾರ್, ನಂ.3277, ಮೂಗೋಳಪ್ಪ ವೃತ್ತ, 29ನೇ ಡಿವಿಷನ್, ದೊಡ್ಡಬಳ್ಳಾಪುರ.	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಬಿ

ಕ್ರ. ಸಂ.	ವಾರ್ಡ್ ಸಂಖ್ಯೆ ಮತ್ತು ಹೆಸರು	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ	ಯಾವ ಪಕ್ಷದಿಂದ ಚುನಾಯಿತರಾಗಿರುತ್ತಾರೆ	ಮೀಸಲಾತಿ ವಿವರ
1	2	3	4	5
17	17–ಕಲ್ಲುಪೇಟೆ	ಪಂಜಿನಿ ಪಿ.ಸಿ. ಲಕ್ಷ್ಮೀನಾರಾಯಣ, ಮಾರುತಿ ವ್ಯಾಯಾಮ ಶಾಲೆ ಹತ್ತಿರ, ಕುಚ್ಚಪ್ಪನಪೇಟೆ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
18	18–ಕುಚ್ಚಪ್ಪನಪೇಟೆ	ಎ.ಲೋಕೇಶ್‌ಬಾಬು, ನಂ.2140, ತ್ಯಾಗರಾಜನಗರ, ದೊಡ್ಡಬಳ್ಳಾಪುರ	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಸಾಮಾನ್ಯ
19	19–ದೇವರಾಜನಗರ	ಕೆ.ಹೆಚ್.ವೆಂಕಟರಾಜು, ನಂ.2058, ದೇವರಾಜನಗರ, ದೊಡ್ಡಬಳ್ಳಾಪುರ	ಭಾರತೀಯ ಜನತಾ ಪಾರ್ಟಿ	ಸಾಮಾನ್ಯ
20	20–ಪಿಂಜಾರುಬೀಡು	ರಮೇಶ್ ಎನ್.ಕೆ. ನಂ.281, ಕರೇನಹಳ್ಳಿ, ದೊಡ್ಡಬಳ್ಳಾಪುರ	ಪಕ್ಷೇತರರು	ಹಿಂದುಳಿದ ವರ್ಗ ಎ
21	21–ಹೇಮಾವತಿ ಪೇಟೆ	ಎಸ್.ಗಾಯಿತ್ರಿ ಪ್ರಕಾಶ್, ನಂ.3068, ನಗರ್ತರ ಪೇಟೆ, ದೊಡ್ಡಬಳ್ಳಾಪುರ	ಪಕ್ಷೇತರರು	ಸಾಮಾನ್ಯ (ಮ)
22	22–ನಗರ್ತರಪೇಟೆ	ಕೆ.ಜಿ.ರಘುರಾಮ್ (ತಿಮ್ಮಣ್ಣ), ಚಿಕ್ಕಪೇಟೆ, ದೊಡ್ಡಬಳ್ಳಾಪುರ	ಭಾರತೀಯ ರಾಷ್ಟ್ರೀಯ ಕಾಂಗ್ರೇಸ್	ಹಿಂದುಳಿದ ವರ್ಗ ಎ
23	23–ಚಿಕ್ಕಪೇಟೆ	ಶಂಷುನ್ನೀಸಾ, ನಂ.2652, ಚಿಕ್ಕಪೇಟೆ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ (ಮ)
24	24–ವೈಶ್ಯರಬೀದಿ	ಸುವರ್ಣ, ನಂ.3777, ದೇಶದಪೇಟೆ, ದೊಡ್ಡಬಳ್ಳಾಪುರ	ಪಕ್ಷೇತರರು	ಹಿಂದುಳಿದ ವರ್ಗ ಬಿ (ಮ)
25	25–ಎಲೇಪೇಟೆ	ಯಶೋದಮ್ಮ ಕೋಂ ಎಸ್.ರಾಜಶೇಖರ್, ನಂ.476, ಚೌಡೇಶ್ವರಿ ಗುಡಿ ಬೀದಿ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ (ಮ)
26	26–ಕುಂಬಾರಪೇಟೆ	ಅನುಸೂಯಮ್ಮ ಕೋಂ ಎಂ.ಸುಬ್ರಮಣ್ಯಂ, ನಂ.27/179, 26ನೇ ವಾರ್ಡ್, ಭಾರತೀನಗರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ (ಮ)
27	27–ರೋಜಿಪುರ	ಎಸ್.ಸುಶೀಲಮ್ಮ ಕೋಂ ರಾಘವ, ನಂ.619, ಮೈಲಾರಲಿಂಗ ದೇವಸ್ಥಾನದ ಬಳಿ ರೋಜಿಪುರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ (ಮ)
28	28–ಗಾಣಿಗರಪೇಟೆ	ವಿ.ಎಸ್.ರವಿಕುಮಾರ್ ಬಿನ್ ಬಿ.ಸಿ.ಶಿವಣ್ಣ, ಸುಜಾತ ನಿಲಯ, ಸೋಮೇಶ್ವರ ಬಡಾವಣೆ, ಗಂಗಾಧರಪುರ, 1ನೇ ವಾರ್ಡ್, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಹಿಂದುಳಿದ ವರ್ಗ ಎ
29	29–ವಡ್ಡರಪೇಟೆ	ಮಲ್ಲಿಕಾರ್ಜುನ (ಮಲ್ಲು) ಬಿನ್ ಲೇ.ನಂಜುಂಡಯ್ಯ, ನಂ.2442/7, 4ನೇ ಡಿವಿಷನ್, ರೋಜಿಪುರ, ವಿನಾಯಕನಗರ, ದೊಡ್ಡಬಳ್ಳಾಪುರ	ಪಕ್ಷೇತರರು	ಪರಿಶಿಷ್ಟ ಜಾತಿ
30	30–ಶಾಂತಿನಗರ	ಫಯಾಜ್ ಪಾಷ ಬಿನ್ ಶೇಖ್ ಅಹಮದ್, ನಂ.366, 30ನೇ ವಾರ್ಡ್, ಇಸ್ಲಾಂಪುರ, ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ
31	31–ಮುತ್ಯಾಲಮ್ಮ ಗುಡಿ	ಆರ್.ಗೋವಿಂದರಾಜು ಬಿನ್ ಸಿ.ರಾಮಭದ್ರಯ್ಯ, ನಂ.3769, ದೇಶದ ಪೇಟೆ, ಗರಡಿ ಮನೆ ಮುಂಭಾಗ, ತಾಲ್ಲೂಕು ಕಛೇರಿ ರಸ್ತೆ,. ದೊಡ್ಡಬಳ್ಳಾಪುರ	ಜನತಾದಳ (ಜಾತ್ಯಾತೀತ)	ಸಾಮಾನ್ಯ

ಪಿ. ಹೇಮಲತಾ
ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಶೇಷ ರಾಜ್ಯ ಪತ್ರಿಕೆ

ಭಾಗ - III Part - III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪) Bangalore, Thursday, March 28, 2013 (Chaithra 7, Shaka Varsha 1934)	ನಂ. ೬೪೮ No. 648

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಅಧಿಸೂಚನೆ

ಸಂ.ಇಎಲ್ಎನ್(ಪಂ)ಸಿಆರ್.30/2012–13, ಬೆಂಗಳೂರು, ದಿನಾಂಕ: 28–03–2013

ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು 1993ರ 12ನೇ ನಿಯಮದ ಮೇರೆಗೆ ಹೊರಡಿಸಲಾದ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಇಎಲ್ಎನ್(ಪಂ)ಸಿಆರ್.30/2012–13, ದಿನಾಂಕ:28–01–2013ರ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಹಾರೋಹಳ್ಳಿ ಮತ್ತು ಕೋರಮಂಗಲ ಗ್ರಾಮ ಪಂಚಾಯತಿಗಳಿಗೆ ವಿವಿಧ ಕ್ಷೇತ್ರಗಳಿಂದ ಚುನಾಯಿತ ಸದಸ್ಯರನ್ನು ತುಂಬಲು ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿದ್ದು, ಸದರಿ ಚುನಾವಣೆಯ ಫಲಿತಾಂಶವನ್ನು ಸಂಬಂಧಪಟ್ಟ ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 5ರ ಉಪ ಪ್ರಕರಣ 8ರಲ್ಲಿ ಮತ್ತು ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು 1993ರ ನಿಯಮ 76ರ ಪ್ರಕಾರ ಜಿಲ್ಲಾಧಿಕಾರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಪಿ.ಹೇಮಲತಾ, ಭಾ.ಆ.ಸೇ., ಆದ ನಾನು ಸದರಿ ಗ್ರಾಮ ಪಂಚಾಯತಿಗಳಿಗೆ ಹೊಸದಾಗಿ ಆಯ್ಕೆಯಾದ ಸದಸ್ಯರುಗಳ ಹೆಸರುಗಳನ್ನು ಈ ಕೆಳಗೆ ನಮೂದಿಸಿರುವಂತೆ ಪ್ರಕಟಿಸಿರುತ್ತೇನೆ.

ತಾಲ್ಲೂಕು: ದೇವನಹಳ್ಳಿ

ಕ್ರ. ಸಂ.	ಗ್ರಾಮ ಪಂಚಾಯಿತಿ ಕ್ರಮಸಂಖ್ಯೆ ಮತ್ತು ಹೆಸರು	ಕ್ಷೇತ್ರದ ಕ್ರಮ ಸಂಖ್ಯೆ ಮತ್ತು ಹೆಸರು	ಕ್ಷೇತ್ರಕ್ಕೆ ನಿಗದಿ ಪಡಿಸಿದ ಸ್ಥಾನಗಳು	ಮೀಸಲಾತಿ ಸ್ಥಾನ	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ
1	2	3	4	5	6
1	10–ಹಾರೋಹಳ್ಳಿ	1–ಹಾರೋಹಳ್ಳಿ	4	ಅನುಸೂಚಿತ ಜಾತಿ (ಮಹಿಳೆ)	ಲಕ್ಷ್ಮಮ್ಮ ಕೋಂ ಗಂಗಾಧರ, ಹಾರೋಹಳ್ಳಿ ಗ್ರಾಮ ಮತ್ತು ಅಂಚೆ, ದೇವನಹಳ್ಳಿ ತಾಲ್ಲೂಕು
				ಅನುಸೂಚಿತ ಪಂಗಡ (ಮಹಿಳೆ)	ಅಕ್ಕಯಮ್ಮ ಕೋಂ ಸಂಜೀವಪ್ಪ, ತಿಮ್ಮಹಳ್ಳಿ ಗ್ರಾಮ, ಹಾರೋಹಳ್ಳಿ ಅಂಚೆ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ (ಮಹಿಳೆ)	ಮುನಿನಾರಾಯಣಮ್ಮ ಕೋಂ ಎಚ್.ಎಂ. ಮುನಿರಾಜು, ಹಾರೋಹಳ್ಳಿ ಗ್ರಾಮ ಮತ್ತು ಅಂಚೆ, ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ	ಎನ್.ರಾಜಗೋಪಾಲ ಬಿನ್ ನರಸಿಂಹಯ್ಯ, ಹಾರೋಹಳ್ಳಿ ಗ್ರಾಮ ಮತ್ತು ಅಂಚೆ, ದೇವನಹಳ್ಳಿ ತಾಲ್ಲೂಕು
2	10–ಹಾರೋಹಳ್ಳಿ	2–ಚಿಕ್ಕನಹಳ್ಳಿ	3	ಅನುಸೂಚಿತ ಜಾತಿ	ಡಿ.ನಾರಾಯಣಸ್ವಾಮಿ ಬಿನ್ ದೊಡ್ಡಮುನಿ ವೆಂಕಟಪ್ಪ, ಚಿಕ್ಕನಹಳ್ಳಿ ಗ್ರಾಮ, ವಿಜಯಪುರ ಅಂಚೆ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ (ಮಹಿಳೆ)	ಕವಿತ ಕೋಂ ರಾಮೇಗೌಡ, ಚಿಕ್ಕನಹಳ್ಳಿ ಗ್ರಾಮ, ವಿಜಯಪುರ ಅಂಚೆ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ	ವಿ.ಸುಬ್ಬಣ್ಣ ಬಿನ್ ವೆಂಕಟರಾಯಪ್ಪ, ಚಿಕ್ಕನಹಳ್ಳಿ ಗ್ರಾಮ, ವಿಜಯಪುರ ಅಂಚೆ. ದೇವನಹಳ್ಳಿ ತಾಲ್ಲೂಕು
3	10–ಹಾರೋಹಳ್ಳಿ	3–ತಿಮ್ಮಹಳ್ಳಿ	2	ಅನುಸೂಚಿತ ಜಾತಿ	ಮುನಿರಾಜು ಎನ್ ಬಿನ್ ನಾರಾಯಣಪ್ಪ, ತಿಮ್ಮಹಳ್ಳಿ ಗ್ರಾಮ, ಬಿಜ್ಜವಾರ ಅಂಚೆ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ (ಮಹಿಳೆ)	ರೂಪ ಕೆ. ಬಿನ್ ಕೃಷ್ಣಪ್ಪ, ತಿಮ್ಮಹಳ್ಳಿ ಗ್ರಾಮ, ಬಿಜ್ಜವಾರ ಅಂಚೆ. ದೇವನಹಳ್ಳಿ ತಾಲ್ಲೂಕು

ಕ್ರ ಸಂ.	ಗ್ರಾಮ ಪಂಚಾಯಿತಿ ಕ್ರಮಸಂಖ್ಯೆ ಮತ್ತು ಹೆಸರು	ಕ್ಷೇತ್ರದ ಕ್ರಮ ಸಂಖ್ಯೆ ಮತ್ತು ಹೆಸರು	ಕ್ಷೇತ್ರಕ್ಕೆ ನಿಗದಿ ಪಡಿಸಿದ ಸ್ಥಾನಗಳು	ಮೀಸಲಾತಿ ಸ್ಥಾನ	ಆಯ್ಕೆಯಾದ ಸದಸ್ಯರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ
1	**2**	**3**	**4**	**5**	**6**
4	10–ಹಾರೋಹಳ್ಳಿ	4–ಬುಳ್ಳಹಳ್ಳಿ	2	ಅನುಸೂಚಿತ ಜಾತಿ (ಮಹಿಳೆ)	ಮುನಿರಾಜಮ್ಮ ಕೋಂ ಪೂಜಪ್ಪ, ಬುಳ್ಳಹಳ್ಳಿ ಗ್ರಾಮ, ಹಾರೋಹಳ್ಳಿ ಅಂಚೆ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ	ರವಿಕುಮಾರ್ ಬಿನ್ ನಂಜುಂಡಪ್ಪ, ಬುಳ್ಳಹಳ್ಳಿ ಗ್ರಾಮ, ಹಾರೋಹಳ್ಳಿ ಅಂಚೆ. ದೇವನಹಳ್ಳಿ ತಾಲ್ಲೂಕು
1	11–ಕೋರಮಂಗಲ	1–ಕೋರಮಂಗಲ	3	ಅನುಸೂಚಿತ ಜಾತಿ	ಎಂ.ಶಿವಾನಂದ ಬಿನ್ ಮುನಿವೆಂಕಟಪ್ಪ, ಆವತಿ ಅಂಚೆ, ಕೋರಮಂಗಲ. ದೇವನಹಳ್ಳಿ ತಾಲ್ಲೂಕು
				ಅನುಸೂಚಿತ ಪಂಗಡ (ಮಹಿಳೆ)	ಆನಂದಮ್ಮ ಕೋಂ ಕೃಷ್ಣಪ್ಪ, ಆವತಿ ಅಂಚೆ, ಕೋರಮಂಗಲ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ (ಮಹಿಳೆ)	ಎಂ.ಪಾರಿಜಾತ ಕೋಂ ಭೈರೇಗೌಡ, ಆವತಿ ಅಂಚೆ, ಕೋರಮಂಗಲ, ದೇವನಹಳ್ಳಿ ತಾಲ್ಲೂಕು
2	11–ಕೋರಮಂಗಲ	2–ಕೋರಮಂಗಲ	3	ಅನುಸೂಚಿತ ಜಾತಿ (ಮಹಿಳೆ)	ವಸಂತಮ್ಮ ಕೋಂ ದಾಸಪ್ಪ, ಆವತಿ ಅಂಚೆ, ಕೋರಮಂಗಲ, ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ (ಮಹಿಳೆ)	ಮುನಿರತ್ನಮ್ಮ ಕೋಂ ಕೃಷ್ಣಮೂರ್ತಿ ಎ. ಆವತಿ ಅಂಚೆ, ಕೋರಮಂಗಲ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ	ಕೆ.ಮುನಿವೆಂಕಟಪ್ಪ ಬಿನ್ ಕೆಂಪಣ್ಣ, ಆವತಿ ಅಂಚೆ, ಕೋರಮಂಗಲ. ದೇವನಹಳ್ಳಿ ತಾಲ್ಲೂಕು
3	11–ಕೋರಮಂಗಲ	3–ದಂಡಿಗಾನಹಳ್ಳಿ	4	ಅನುಸೂಚಿತ ಜಾತಿ (ಮಹಿಳೆ)	ಪದ್ಮ ಕೋಂ ಮುನಿಯಪ್ಪ, ಹಾರೋಹಳ್ಳಿ ಅಂಚೆ, ಬೈರಾಪುರ. ದೇವನಹಳ್ಳಿ ತಾಲ್ಲೂಕು
				ಹಿಂದುಳಿದ ವರ್ಗ–ಅ (ಮಹಿಳೆ)	ಭಾಗ್ಯಮ್ಮ ಕೋಂ ಮಂಜುನಾಥಾಚಾರಿ ಡಿ.ಎಂ, ಹಾರೋಹಳ್ಳಿ ಅಂಚೆ, ದಂಡಿಗಾನಹಳ್ಳಿ, ದೇವನಹಳ್ಳಿ ತಾಲ್ಲೂಕು
3	11–ಕೋರಮಂಗಲ	3–ದಂಡಿಗಾನಹಳ್ಳಿ	4	ಸಾಮಾನ್ಯ (ಮಹಿಳೆ)	ಮೀನಾಕ್ಷಿ ಕೆ.ವಿ. ಕೋಂ ಗಂಗರಾಜಪ್ಪ, ಹಾರೋಹಳ್ಳಿ ಅಂಚೆ, ದಂಡಿಗಾನಹಳ್ಳಿ. ದೇವನಹಳ್ಳಿ ತಾಲ್ಲೂಕು
				ಸಾಮಾನ್ಯ	ರಾಮಪ್ಪ ಬಿನ್ ದೊಡ್ಡನಂಜುಂಡಪ್ಪ, ಹಾರೋಹಳ್ಳಿ ಅಂಚೆ, ದಂಡಿಗಾನಹಳ್ಳಿ. ದೇವನಹಳ್ಳಿ ತಾಲ್ಲೂಕು

ಪಿ. ಹೇಮಲತಾ
ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪)	ನಂ.೬೪೯
Part – III	Bangalore, Thursday, March 28, 2013 (Chaithra 7, Shaka Varsha 1934)	No. 649

PUBLIC WORKS, PORTS & INLAND WATER TRANSPORT SECRETARIAT

NOTIFICATION

No. PWD 117 EAP 2012 Bengaluru, Dated: 28-03-2013

1. The concession Agreement for the deveolopment of Waghdhari-Ribbanapally State Highway-10 from Maharashtra Border to Andhra Pradesh Border via Alanda-Gulbarga-Malked-Sedam in Gulbarga District for a length of 135.85

km (excluding Gulbarga ring road) project under PPP-BOT-VGF(Toll) was signed on 4th day of June 2010 between Governor of Karnataka represented by Managing Director, Karnatka Road Development Corporation Ltd., Bangalore and M/s GVRMP Whagdhari Ribbnapally Tollway Pvt.Ltd. Bangalore.

2. The concession period is for a period of 30 (thirty) years commencing from 04-06-2010.

3. A per Article 27, the user fee Notification is being published by the PWD in the Official Gazztte of the State of Karnataka. The revision of user fee is to be computed and notified in accordance with the agreement and the Fee Notification No.PWD 117 EAP 2012 Bangalore dated. 05-09-2012

4. Accordingly, the revised user fee schedule is computed as per Article 27.2.1 for the period effective from 01-04-2013 till 31-03-2014 as per Annexure-1 and this Notification is applicable to Waghdhari-Ribbanapally State Highway-10 from Maharashtra Border to Andhra Pradesh Border via Alanda-Gulbarga-Malked-Sedam in Gulbarga District for a length of 135.85 km (excluding Gulbarga ring road) project under PPP-BOT-VGF(Toll).

VIJAY B. CHANDAPUR
Under Secretary to Government
External Aided Projects (EAP)
Public Works, Ports & Inland
Water Transport Department

Annexure-1

For Notification no. PWD 117 EAP 2012 dated 28-03-2013

Name of Project :Waghdhari-Ribbanapally State Highway-10 from Maharashtra Border to Andhra Pradesh Border via Alanda-Gulbarga-Malked-Sedam in Gulbarga District for a length of 135.85 km (excluding Gulbarga ring road) project under PPP-BOT-VGF(Toll)

Toll rates for Single Trip

(from 1st April 2013 to 31st March 2014)

Table – 1

(Amount in Rs.)

Type of vehicle	Section I (Km 0.000 to Km 60.610)		Section II (Km 65.800 to Km 141.867)	
	Toll charges for crossing One-Toll Plaza	Toll charges for crossing Both-Toll Plaza	Toll charges for crossing One-Toll Plaza	Toll charges for crossing Both-Toll Plaza
1	2	3	4	5
Car/ Jeep / Van or Light Motor Vehicles	40	50	50	65
Light Commercial Vehicles Light Goods Vehicles or Mini Bus	60	75	75	95
Bus, Commercial Vehicles (with Two Axle)	125	155	155	195
Heavy Construction Machinery Earth Moving Equipments or Multi Axle Vehicles (three to six Axle)	185	230	235	290

Toll rates for frequent users (Daily Return)
(from 1st April 2013 to 31st March 2014)

Table – 2

(Amount in Rs.)

Type of vehicle	Section I (Km 0.000 to Km 60.610)		Section II (Km 65.800 to Km 141.867)	
	Toll charges for crossing One-Toll Plaza	Toll charges for crossing Both-Toll Plaza	Toll charges for crossing One-Toll Plaza	Toll charges for crossing Both-Toll Plaza
1	2	3	4	5
Car/ Jeep / Van or Light Motor Vehicles	60	75	75	95
Light Commercial Vehicles Light Goods Vehicles or Mini Bus	95	115	115	145
Bus, Commercial Vehicles (with Two Axle)	185	235	235	290
Heavy Construction Machinery Earth Moving Equipments or Multi Axle Vehicles (three to six Axle)	280	350	350	440

The toll rates for Local Traffic
(within 10 Km Radius)
(from 1st April 2013 to 31st March 2014)

Table – 3

(Amount in Rs.)

Type of vehicle	Section I (Km 0.000 to Km 60.610)		Section II (Km 65.800 to Km 141.867)	
	Toll charges for crossing One-Toll Plaza	Toll charges for crossing Both-Toll Plaza	Toll charges for crossing One-Toll Plaza	Toll charges for crossing Both-Toll Plaza
1	2	3	4	5
Car/ Jeep / Van or Light Motor Vehicles	150	150	150	150

The toll rates for Local Commercial Traffic
(within 20 km Radius)
(from 1st April 2013 to 31st March 2014)

Table – 4

(Amount in Rs.)

Type of vehicle	Section I (Km 0.000 to Km 60.610)		Section II (Km 65.800 to Km 141.867)	
	Toll charges for crossing One-Toll Plaza	Toll charges for crossing Both-Toll Plaza	Toll charges for crossing One-Toll Plaza	Toll charges for crossing Both-Toll Plaza
1	2	3	4	5
Light Commercial Vehicles Light Goods Vehicles or Mini Bus	1850	2315	2325	2905
Bus, Commercial Vehicles (with Two Axle)	3725	4660	4675	5845

The toll rates for frequent users (Monthly Pass)
(from 1st April 2013 to 31st March 2014)

Table – 5

(Amount in Rs.)

Type of vehicle	Section I (Km 0.000 to Km 60.610)		Section II (Km 65.800 to Km 141.867)	
	Toll charges for crossing One-Toll Plaza	Toll charges for crossing Both-Toll Plaza	Toll charges for crossing One-Toll Plaza	Toll charges for crossing Both-Toll Plaza
1	2	3	4	5
Car/ Jeep / Van or Light Motor Vehicles	1370	1715	1720	2150
Light Commercial Vehicles Light Goods Vehicles or Mini Bus	2060	2575	2585	3230
Bus, Commercial Vehicles (with Two Axle)	4140	5175	5195	6495
Heavy Construction Machinery Earth Moving Equipments or Multi Axle Vehicles (three to six Axle)	6200	7750	7780	9725

VIJAY B. CHANDAPUR
Under Secretary to Government, External Aided Projects (EAP)
Public Works, Ports & Inland Water Transport Department

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪)	ನಂ. ೬೫೦
Part – IV-A	**Bangalore, Thursday, March 28, 2013 (Chaithra 7, Shaka Varsha 1934)**	**No. 650**

HOME SECRETARIAT

NOTIFICATION

No. HD 129 POSIPA 2013, Bangalore, Dated: 27-03-2013

In exercise of the powers conferred by section 28A of the Representation of the People Act, 1951 (Central Act 43 of 1951), the Government of Karnataka hereby designate the following categories of police officers and police personnel in all the wings of the Police Department including Home Guards and Ex-servicemen who are involved in any way in election related arrangements, in view of general elections to the Karnataka State Legislative Assembly, 2013 as per the Schedule announced by the Election Commission of India, New Delhi vide No.ECI/PN/14/2013, dated 20th March, 2013, to perform duties in connection with the conduct of elections, with effect from the 20th March, 2013 namely:-

1. Director General and Inspector General of Police
2. Additional Director General of Police
3. Commissioner of Police / Additional Commissioner of Police
4. Inspector General of Police
5. Deputy Inspector General of Police
6. Joint / Deputy Commissioner of Police
7. Superintendent of Police
8. Additional Superintendent of Police
9. Assistant Commissioner of Police / Deputy Superintendent of Police
10. Inspector of Police
11. Sub-Inspector of Police

12. Assistant Sub-Inspector of Police
13. Head constable
14. Constable

By order and in the name of Governor of Karnataka

V. UMESH
Principal Secretary to Government
Home Department

ವಿಶೇಷ ರಾಜ್ಯ ಪತ್ರಿಕೆ

ಭಾಗ – III	**ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪)**	**ನಂ. ೬೫೧**
Part – III	**Bangalore, Thursday, March 28, 2013 (Chaithra 7, Shaka Varsha 1934)**	**No. 651**

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲೋಇ 197 ಸೇಸಕಿ 12, ಬೆಂಗಳೂರು ದಿನಾಂಕ: 26ನೇ ಮಾರ್ಚ್, 2013

ಲೋಕೋಪಯೋಗಿ ಇಲಾಖೆ ಮತ್ತು ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಇಂಜಿನಿಯರ್‌ಗಳ ವೃಂದದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ:98:ಸೇಸಕಿ:08 ದಿನಾಂಕ 15–11–2010ರಲ್ಲಿ ದಿನಾಂಕ 1–1–1980 ರಿಂದ 31–12–2004ರವರೆಗೆ ಇದ್ದಂತೆ ಪ್ರಕಟಿಸಲಾಗಿದ್ದು ಸದರಿ ಅಧಿಸೂಚನೆಯು ದಿನಾಂಕ 22–11–2010ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ದಿನಾಂಕ: 17–7–2012 ಮತ್ತು 28–1–2013ರ ಪತ್ರಗಳಲ್ಲಿ ಶ್ರೀ ಆರ್. ರಾಮಪ್ರಸಾದ್, ಕಿರಿಯ ಇಂಜಿನಿಯರ್, ಇವರು ಕಾವೇರಿ ನೀರಾವರಿ ನಿಗಮದಲ್ಲಿ ದಿನಾಂಕ: 24–4–1989ರಂದು ಕಿರಿಯ ಇಂಜಿನಿಯರ್ ಹುದ್ದೆಯ ಕರ್ತವ್ಯಕ್ಕೆ ಸೇರಿದ್ದು ಸರ್ಕಾರದ ಆದೇಶ ಸಂಖ್ಯೆ: ನೀಇ:35:ಸನೀರ:93 ದಿನಾಂಕ 3–12–1994ರನ್ವಯ ನೀರಾವರಿ ಇಲಾಖೆಯಲ್ಲಿ ವಿಲೀನಗೊಂಡು ಸರ್ಕಾರದ ಆದೇಶ ಸಂಖ್ಯೆ: ನೀಇ:294:ಸೇಸಕಿ:96 ದಿನಾಂಕ 16–10–96ರಲ್ಲಿ ಕಿರಿಯ ಇಂಜಿನಿಯರ್ ವೃಂದದಿಂದ ಸಹಾಯಕ ಇಂಜಿನಿಯರ್ ವೃಂದಕ್ಕೆ ವೃಂದ ಬದಲಾವಣೆ ಹೊಂದಿ ದಿನಾಂಕ: 31–10–96ರಿಂದ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತಾಪಟ್ಟಿಯಲ್ಲಿ ಇವರ ಹೆಸರು ಸೇರ್ಪಡೆಗೊಂಡಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಮುಂದುವರೆದು ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದ ಅನುಸಾರ ಬಿ.ಇ.ಪದವಿ ಪಡೆದ ಕಿರಿಯ ಇಂಜಿನಿಯರ್‌ಗಳು ಸಹಾಯಕ ಇಂಜಿನಿಯರ್ ವೃಂದಕ್ಕೆ ವೃಂದ ಬದಲಾವಣೆ ಹೊಂದಿದಲ್ಲಿ ನಿಯಮಗಳಂತೆ ಅವರುಗಳು ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ಸಲ್ಲಿಸಿದ 1/3 ಭಾಗದಷ್ಟು ಸೇವೆಯನ್ನು ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತೆಯಲ್ಲಿ ಪರಿಗಣಿಸಲು ಅವಕಾಶ ಕಲ್ಪಿಸಿರುವುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 98 ಸೇಸಕಿ 08 ದಿನಾಂಕ 15–11–2010ರಲ್ಲಿ ಪ್ರಕಟಿಸಲಾಗಿರುವ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಜೇಷ್ಠತೆಯನ್ನು ದಿನಾಂಕ 15–3–96 ರಿಂದ ಪರಿಗಣಿಸಿ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಕಲ್ಪಿಸಿರುವ ಅವಕಾಶದಂತೆ, ಪದವಿ ಹೊಂದಿದ ಕಿರಿಯ ಇಂಜಿನಿಯರ್‌ಗಳು ಸಹಾಯಕ ಇಂಜಿನಿಯರ್ ಹುದ್ದೆಗೆ ವೃಂದ ಬದಲಾವಣೆಯ ಮುಖಾಂತರ ವರ್ಗಾವಣೆಯಾಗಿ ನೇಮಕಗೊಂಡ ತರುವಾಯ ಅವರುಗಳಿಗೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಮುಂದಿನ ಹುದ್ದೆಯಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಪದೋನ್ನತಿಗೆ ಪರಿಗಣಿಸುವ ಸಂದರ್ಭದಲ್ಲಿ ಅವರುಗಳು ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯಲ್ಲಿ 1/3ನೇ ಭಾಗ ಗರಿಷ್ಠ 4 ವರ್ಷಗಳ ಸೇವೆಯನ್ನು ಸಹಾಯಕ ಇಂಜಿನಿಯರ್ ವೃಂದಕ್ಕೆ ಪರಿಗಣಿಸಿ ಸಹಾಯಕ ಇಂಜಿನಿಯರ್ ಹುದ್ದೆಯ ಜೇಷ್ಠತೆಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಶ್ರೀ ಆರ್. ರಾಮಪ್ರಸಾದ್, ಸಹಾಯಕ ಇಂಜಿನಿಯರ್ ಇವರು ಈ ಹಿಂದೆ ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ದಿನಾಂಕ 3–12–94 ರಿಂದ 31–10–96 ರವರೆಗೆ ಸಲ್ಲಿಸಿದ ಸೇವೆಯಲ್ಲಿ 1/3 ಭಾಗದ ಸೇವೆಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿಭಾಗ–1 ವೃಂದಕ್ಕೆ ಪದೋನ್ನತಿಗೆ ಪರಿಗಣಿಸುವ ಸಲುವಾಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಕಲ್ಪಿಸಿರುವ ಅವಕಾಶದಂತೆ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತಾ ಪಟ್ಟಿಯಲ್ಲಿ ದಿನಾಂಕ 1–10–2001ಕ್ಕೆ ಕಾಲ್ಪನಿಕವಾಗಿ ಪರಿಗಣಿಸಿ ಅಧಿಸೂಚನೆ ಸಂಖ್ಯೆ: ಲೋಇ:98:ಸೇಸಕಿ:08 ದಿನಾಂಕ 15–11–2010ರ ಸಹಾಯಕ ಇಂಜಿನಿಯರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 3508– A ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಿ ಸೇರ್ಪಡೆ ಮಾಡಬಹುದಾಗಿರುತ್ತದೆ.

Ranking No	Provision AE. GRD No.	Name of the Engineer	SC/ ST	Date of Birth	Date of En try into service	Date of Regular Appoint ment to the cadre	ReMrks
1	2	3	4	5	6	7	8
3508-A	-	R. Ramprasad	-	12-02-59	24-04-1989	31-10-1996 15-03-1996 *	CLICAB/ CC

* He shall be entitled to count his seniority from the notational date, only for the purpose of consideration for promotion to the post of Assistant Executive Engineer (Division-I).

ಸದರಿ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಭಾದಿತರಾಗಬಹುದಾದ ನೌಕರರು / ಅಧಿಕಾರಿಗಳು ಅವರ ಆಕ್ಷೇಪಣೆ / ಮನವಿಗಳಿದ್ದಲ್ಲಿ ಸಮರ್ಥನೀಯ ದಾಖಲೆಗಳೊಂದಿಗೆ ಸರ್ಕಾರದ ಕಾರ್ಯದರ್ಶಿಗಳು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜನಸಾರಿಗೆ ಇಲಾಖೆ, ವಿಕಾಸ ಸೌಧ, 3ನೇ ಮಹಡಿ, ಬೆಂಗಳೂರು 560001 ಇವರಿಗೆ ಸಲ್ಲಿಸಬಹುದಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾದ ಆಕ್ಷೇಪಣೆ / ಸಲಹೆ / ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಮೋಹನ್‌ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ (ಸೇವೆಗಳು–ಬಿ)

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಗುರುವಾರ, ಮಾರ್ಚ್ ೨೮, ೨೦೧೩ (ಚೈತ್ರ ೭, ಶಕ ವರ್ಷ ೧೯೩೪)	ನಂ. ೬೫೨
Part – III	Bangalore, Thursday, March 28, 2013 (Chaithra 7, Shaka Varsha 1934)	No. 652

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲೋಇ 40 ಸೇಸಕಿ 13, ಬೆಂಗಳೂರು ದಿನಾಂಕ: 26ನೇ ಮಾರ್ಚ್, 2013

ಲೋಕೋಪಯೋಗಿ ಇಲಾಖೆ ಮತ್ತು ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಇಂಜಿನಿಯರ್‌ಗಳ ವೃಂದದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ:98:ಸೇಸಕಿ:08 ದಿನಾಂಕ 15–11–2010ರಲ್ಲಿ ದಿನಾಂಕ 1–1–1980 ರಿಂದ 31–12–2004ರವರೆಗೆ ಇದ್ದಂತೆ ಪ್ರಕಟಿಸಲಾಗಿದ್ದು ಸದರಿ ಅಧಿಸೂಚನೆಯು ದಿನಾಂಕ 22–11–2010ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ದಿನಾಂಕ 17–1–2013ರ ಪತ್ರದಲ್ಲಿ ಶ್ರೀ ಮಹ್ಮದ್ ಅಜರುಲ್ ಹಕ್ ಸಿದ್ದಿಕಿ, ಸಹಾಯಕ ಇಂಜಿನಿಯರ್, ಇವರು ದಿನಾಂಕ 1–11–88 ರಲ್ಲಿ ದಿನಗೂಲಿ ಮೇಲೆ ಸೇವೆಗೆ ಸೇರಿದ್ದು, 31–10–98ಕ್ಕೆ 10 ವರ್ಷಗಳ ಸೇವೆ ಪೂರೈಸಿದ್ದು ನಂತರ ಅವರ ಸೇವೆಯನ್ನು ಸಂಖ್ಯೆ: ನೀಇ:395:ಪಿಡಬ್ಲ್ಯೂ:ಸಿ:2000 ದಿನಾಂಕ 13–7–2000ರಲ್ಲಿ ದಿನಾಂಕ 1–11–98ರಿಂದ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಸಕ್ರಮಾತಿಗೊಳಿಸಿದ್ದು ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 98 ಸೇಸಕಿ 08 ದಿನಾಂಕ 15–11–2010ರಲ್ಲಿ ಪ್ರಕಟಿಸಲಾಗಿರುವ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರು ಸೇರ್ಪಡೆಗೊಂಡಿರುವುದಿಲ್ಲವಾದ ಕಾರಣ ಈಗ ಸದರಿಯವರ ಹೆಸರನ್ನು ದಿನಾಂಕ 15–11–2010ರ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ರವರ ಶಿಫಾರಸ್ಸನ್ನು ಪರಿಶೀಲಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ:98:ಸೇಸಕಿ:08 ದಿನಾಂಕ 15–11–2010ರಲ್ಲಿ ಪ್ರಚುರಪಡಿಸಿರುವ ಸಹಾಯಕ ಇಂಜಿನಿಯರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಮಹ್ಮದ್ ಅಜರುಲ್ ಹಕ್ ಸಿದ್ದಿಕಿ, ಸಹಾಯಕ ಇಂಜಿನಿಯರ್ ಇವರ ಹೆಸರನ್ನು ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 3722– A ರಲ್ಲಿ ಸೇರ್ಪಡೆ ಮಾಡಿ ಕೆಳಕಂಡಂತೆ ನಿಗದಿಪಡಿಸಲು ಉದ್ದೇಶಿಸಲಾಗಿದೆ.

Ranking No	Provision AE. GRD No.	Name of the Engineer	SC/ ST	Date of Birth	Date of En try into service	Date of Regular Appointment to the cadre	Remarks
1	2	3	4	5	6	7	8
3722-A	-	MOHD.Azherul Haq Sidiqui	-	15-11-58	1-11-1988	31-10-98	DWR

ಸದರಿ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಭಾದಿತರಾಗಬಹುದಾದ ನೌಕರರು / ಅಧಿಕಾರಿಗಳು ಅವರ ಆಕ್ಷೇಪಣೆ /ಮನವಿಗಳಿದ್ದಲ್ಲಿ ಸಮರ್ಥನೀಯ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, 3ನೇ ಮಹಡಿ, ಬೆಂಗಳೂರು 560001 ಇವರಿಗೆ ಸಲ್ಲಿಸಬಹುದಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾದ ಆಕ್ಷೇಪಣೆ / ಸಲಹೆ / ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಮೋಹನ್‌ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ (ಸೇವೆಗಳು–ಬಿ)

ವಿಶೇಷ ರಾಜ್ಯ ಪತ್ರಿಕೆ

ಭಾಗ – I Part – I	ಬೆಂಗಳೂರು, ಶನಿವಾರ, ಮಾರ್ಚ್ ೩೦, ೨೦೧೩ (ಚೈತ್ರ ೯, ಶಕ ವರ್ಷ ೧೯೩೪) Bangalore, Saturday, March 30, 2013 (Chaithra 9, Shaka Varsha 1934)	ನಂ. ೬೫೩ No. 653

ಕರ್ನಾಟಕ ಸರ್ಕಾರದ ನಡವಳಿಗಳು

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ (ಕಿಲ್ಪಾರ್) ಪ್ರಥಮ ನಿರ್ದೇಶಕರ ನೇಮಕಾತಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಲಾ 185 ಎಲ್ಎಎಂ 2005 ದಿನಾಂಕ 23–09–2005.

2. ಸರ್ಕಾರದ ಆದೇಶ ಸಂಖ್ಯೆ: ಲಾ 143 ಎಲ್ಎಎಂ 2009 ದಿನಾಂಕ: 29–09–2009.

3. ಸರ್ಕಾರದ ಆದೇಶ ಸಂಖ್ಯೆ: ಲಾ 48 ಎಲ್ಎಡಿ 2010 ದಿನಾಂಕ: 03–10–2012.

4. ಸರ್ಕಾರದ ಆದೇಶ ಸಂಖ್ಯೆ: ಲಾ 48 ಎಲ್ ಎಡಿ 2011 ದಿನಾಂಕ: 16–01–2013.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಜಿ. ದಕ್ಷಿಣಾಮೂರ್ತಿರವರನ್ನು ಹೊಸದಾಗಿ ರಚಿತವಾದ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಗೆ ಪ್ರಥಮ ನಿರ್ದೇಶಕರನ್ನಾಗಿ ದಿನಾಂಕ: 31–09–2009ರವರೆಗೆ ನೇಮಕ ಮಾಡಲಾಗಿತ್ತು. ಅವರ ಅಧಿಕಾರಾವಧಿಯನ್ನು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ದಿನಾಂಕ: 01–10–2009 ರಿಂದ ಮತ್ತೆ 3 ವರ್ಷಗಳ ಅವಧಿಗೆ ಮುಂದುವರಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅವರ ಅಧಿಕಾರಾವಧಿಯನ್ನು 3 ತಿಂಗಳ ಅವಧಿಗೆ ಮುಂದುವರಿಸಲಾಗಿತ್ತು. ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪುನ: ಅವರ ಸೇವೆಯನ್ನು ದಿನಾಂಕ: 31–12–2012 ರಿಂದ ಮುಂದಿನ 3 ತಿಂಗಳುಗಳ ಅವಧಿಗೆ ಅಥವಾ ಮುಂದಿನ ನಿರ್ದೇಶಕರ ನೇಮಕಾತಿಯಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿತ್ತು. ಸದರಿ ಆದೇಶದ ಪ್ರಕಾರ ಶ್ರೀ ಜಿ. ದಕ್ಷಿಣಾಮೂರ್ತಿ, ಪ್ರಥಮ ನಿರ್ದೇಶಕರು, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆರವರ ಅಧಿಕಾರಾವಧಿ ದಿನಾಂಕ: 31–03–2013ರಂದು ಕೊನೆಗೊಳ್ಳುತ್ತದೆ. ಆದರೆ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಆಡಳಿತ ಪರಿಷತ್ತಿನ ಸಭೆಯನ್ನು ದಿನಾಂಕ: 21–03–2013ರಂದು ಆಯೋಜಿಸಲಾಗಿರುವುದನ್ನು ಮಾನ್ಯ ಕಾನೂನು ಸಚಿವರ ಮೌಖಿಕ ಆದೇಶದ ಮೇಲೆ ಅನಿರ್ದಿಷ್ಟ ಅವಧಿಗೆ ಮುಂದೂಡಿದ್ದು, ಪ್ರಸ್ತುತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹೊಸದಾಗಿ ಯಾವುದೇ ನೇಮಕಾತಿ ಪ್ರಕ್ರಿಯೆಗಳನ್ನು ಮುಂದುವರೆಸಲು ಸಾಧ್ಯವಿಲ್ಲವಾದ್ದರಿಂದ ಹಾಲಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಯ ಪ್ರಥಮ ನಿರ್ದೇಶಕರಾದ ಶ್ರೀಯುತ ಜಿ. ದಕ್ಷಿಣಾಮೂರ್ತಿರವರ ಅಧಿಕಾರ ಅವಧಿಯನ್ನು ಮುಂದಿನ ಆಡಳಿತ ಪರಿಷತ್ತಿನ ಸಭೆ ಸೇರಿ ಹೊಸ ನಿರ್ದೇಶಕರ ನೇಮಕಾತಿಯಾಗುವವರೆಗೆ ಆಡಳಿತಾತ್ಮಕ ದೃಷ್ಟಿಯಿಂದಾಗಿ ಚುನಾವಣಾ ಪ್ರಕ್ರಿಯೆ ಮುಗಿದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವ ತನಕ ಮುಂದುವರೆಸಲು ಮಾನ್ಯ ಕಾನೂನು ಸಚಿವರು ಸೂಚಿಸಿದ್ದರ ಮೇರೆಗೆ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 48 ಎಲ್ಎಡಿ 2012, ಬೆಂಗಳೂರು, ದಿನಾಂಕ:30–03–2013

ಶ್ರೀ ಜಿ.ದಕ್ಷಿಣಾಮೂರ್ತಿ, ಪ್ರಥಮ ನಿರ್ದೇಶಕರು, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಇವರ ಅಧಿಕಾರಾವಧಿಯು ದಿನಾಂಕ: 31–03–2013ರಂದು ಕೊನೆಗೊಳ್ಳುತ್ತಿದ್ದು, ಪ್ರಸ್ತುತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹೊಸ ತರುವಾಯದ ನಿರ್ದೇಶಕರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಅವಕಾಶ ಇಲ್ಲದಿರುವುದರಿಂದ ಶ್ರೀ ಜಿ. ದಕ್ಷಿಣಾಮೂರ್ತಿ, ಪ್ರಥಮ ನಿರ್ದೇಶಕರವರ ಅಧಿಕಾರಾವಧಿಯನ್ನು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಮುಂದಿನ ತರುವಾಯ ನಿರ್ದೇಶಕರ ನೇಮಕಾತಿಯಾಗುವವರೆಗೆ ಅಥವಾ ಮುಂದಿನ 3 ತಿಂಗಳುಗಳ ಅವಧಿಯವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಎಲ್. ಮಡಿವಾಳ

ಸರ್ಕಾರದ ಅಧೀನ ಕಾರ್ಯದರ್ಶಿಗಳು(ಆಡಳಿತ–2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A	ಬೆಂಗಳೂರು, ಶನಿವಾರ, ಮಾರ್ಚ್ ೩೦, ೨೦೧೩ (ಚೈತ್ರ ೯, ಶಕ ವರ್ಷ ೧೯೩೪)	ನಂ. ೬೫೫
Part – IV-A	Bangalore, Saturday, March 30, 2013 (Chaithra 9, Shaka Varsha 1934)	No. 655

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 10 ಶಾಸನ 2013, ಬೆಂಗಳೂರು, ದಿನಾಂಕ: 30.03.2013

ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕ, 2013 – ಇದಕ್ಕೆ 2013ರ ಮಾರ್ಚ್ ತಿಂಗಳ ಇಪ್ಪತ್ತೈದನೇ ದಿನಾಂಕದಂದು ಘನತೆವೆತ್ತ ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 45 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2013 ರ ಕರ್ನಾಟಕ ಅಧಿನಿಯಮ ಸಂಖ್ಯೆ: 45

(2013ರ ಮಾರ್ಚ್ ಮಾಹೆಯ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಸಿ.ಎಂ.ಆರ್. ವಿಶ್ವವಿದ್ಯಾಲಯ ಅಧಿನಿಯಮ, 2013

(2013ರ ಮಾರ್ಚ್ ಮಾಹೆಯ ಇಪ್ಪತ್ತೈದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಸಾಮಾನ್ಯ, ತಾಂತ್ರಿಕ, ಆರೋಗ್ಯ, ವ್ಯವಸ್ಥಾಪನೆ, ಜೀವ ವಿಜ್ಞಾನಗಳು ಮತ್ತು ಇವುಗಳಿಗೆ ಸಂಬಂಧಪಟ್ಟ ವಲಯಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣದಲ್ಲಿ ಪ್ರಗತಿಪರ ವಿಚಾರಗಳನ್ನು ಪ್ರೋತ್ಸಾಹಿಸಲು ಮತ್ತು ಕೈಗೊಳ್ಳಲು ಸಿ.ಎಂ.ಆರ್. ಜ್ಞಾನಧಾರ ನ್ಯಾಸದ ಮೂಲಕ ಖಾಸಗಿ ವಲಯದಲ್ಲಿ ಒಂದು ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಸಾಮಾನ್ಯ, ತಾಂತ್ರಿಕ, ಆರೋಗ್ಯ, ವ್ಯವಸ್ಥಾಪನೆ, ಜೀವ ವಿಜ್ಞಾನಗಳು ಮತ್ತು ಇವುಗಳಿಗೆ ಸಂಬಂಧಪಟ್ಟ ವಲಯಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣದಲ್ಲಿ ಪ್ರಗತಿಪರ ವಿಚಾರಗಳನ್ನು ಪ್ರೋತ್ಸಾಹಿಸಲು ಮತ್ತು ಕೈಗೊಳ್ಳಲು ಸಿ.ಎಂ.ಆರ್. ಜ್ಞಾನಧಾರ ನ್ಯಾಸದ ಮೂಲಕ ಖಾಸಗಿ ವಲಯದಲ್ಲಿ ಒಂದು ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ - I

ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸಿ.ಎಂ.ಆರ್. ವಿಶ್ವವಿದ್ಯಾಲಯ ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಶೈಕ್ಷಣಿಕ ಪರಿಷತ್ತು (ಅಕೆಡೆಮಿಕ್ ಕೌನ್ಸಿಲ್)"** ಎಂದರೆ, 25ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು;

(ಬಿ) "ಕಾರ್ಯಸೂಚಿ ವಿಷಯಗಳು", ಎಂದರೆ, ಪರಿನಿಯಮಗಳಲ್ಲಿ ಹೆಸರಿಸಬಹುದಾದ ಮತ್ತು ಒಂದು ಸಭೆಯಲ್ಲಿ ಆ ವಿಷಯಗಳನ್ನು ಮತ್ತು ಕಲಾಪಗಳನ್ನು ಅನುಮೋದಿಸಬಹುದೆಂದು ತಮ್ಮ ಸಮ್ಮತಿ ಸೂಚಿಸಿ ಕುಲಾಧಿಪತಿಯವರು ಮುಂಚಿತವಾಗಿಯೇ ಲಿಖಿತ ಅನುಮೋದನೆಯನ್ನು ಕೊಟ್ಟಿದ್ದಾಗ ಮಾತ್ರವೇ ಸಂದರ್ಭಾನುಸಾರ, ಪ್ರಬಂಧಕ ಮಂಡಳಿ ಅಥವಾ ಕಾರ್ಯ ನಿರ್ವಹಣಾ ಪರಿಷತ್ತು ಅಥವಾ ಯಾವುದೇ ಸಮಿತಿಯವರು ಕಾರ್ಯಸೂಚಿಯಲ್ಲಿ ಸೇರಿಸಬಹುದಾದ ಅಥವಾ ಸಭೆಯಲ್ಲಿ ಚರ್ಚೆಗೆ ತೆಗೆದುಕೊಂಡು ನಿರ್ಣಯವನ್ನು ಕೊಡಬಹುದಾದ ಎಲ್ಲಾ ವಿಷಯಗಳು ಮತ್ತು ಕಲಾಪಗಳು;

(ಸಿ) "ಪ್ರಬಂಧಕ ಮಂಡಳಿ" ಎಂದರೆ, 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿ;

(ಡಿ) "ವ್ಯವಸ್ಥಾಪನಾ ಮಂಡಳಿ" ಎಂದರೆ 24ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ;

(ಇ) "ಕುಲಾಧಿಪತಿ", "ಕುಲಪತಿ", "ಸಹಕುಲಪತಿ" ಎಂದರೆ, ಅನುಕ್ರಮವಾಗಿ ವಿಶ್ವವಿದ್ಯಾಲಯ5ಟದ ಕುಲಾಧಿಪತಿ, ಕುಲಪತಿ ಮತ್ತು ಸಹಕುಲಪತಿ;

(ಎಫ್) "ಕ್ಯಾಂಪಸ್" ಎಂದರೆ, ವಿಶ್ವವಿದ್ಯಾಲಯವು ಸ್ಥಾಪಿಸಿ ನಿರ್ವಹಿಸುವ ಒಂದು ಕ್ಯಾಂಪಸ್;

(ಜಿ) "ಸಮಿತಿಗಳು" ಎಂದರೆ, ಈ ಅಧಿನಿಯಮದಡಿಯಲ್ಲಿ ರಚಿಸಿದ ಅಥವಾ ಸಂದರ್ಭಾನುಸಾರವಾಗಿ ವಿಶ್ವವಿದ್ಯಾಲಯದ ವಿವಿಧ ಕಾರ್ಯಕರ್ತರು ರಚಿಸಿರುವ ಸಮಿತಿಗಳು, ಮತ್ತು ಅದರಲ್ಲಿ ನಾಮನಿರ್ದೇಶನ ಸಮಿತಿ, ಹಣಕಾಸು ಸಮಿತಿ ಮತ್ತು ಅಂಥ ಇತರ ಸಮಿತಿಗಳು ಒಳಗೊಳ್ಳುತ್ತವೆ;

(ಎಚ್) "ಘಟಕ ಕಾಲೇಜು" ಎಂದರೆ, ವಿಶ್ವವಿದ್ಯಾಲಯವು ಸ್ಥಾಪಿಸಿ ನಿರ್ವಹಿಸುತ್ತಿರುವ ಒಂದು ಕಾಲೇಜು ಅಥವಾ ಸಂಸ್ಥೆ;

(ಐ) "ಹಣಕಾಸು ಪರಿಷತ್ತು" ಎಂದರೆ, 27ನೇ ಪ್ರಕರಣದ ಅಡಿಯಲ್ಲಿ ರಚಿಸಿದ ವಿಶ್ವವಿದ್ಯಾಲಯದ ಹಣಕಾಸು ಪರಿಷತ್ತು;

(ಜೆ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಕೆ) "ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳು" ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು, ಭಾರತೀಯ ವೈದ್ಯಕೀಯ ಪರಿಷತ್ತು, ಭಾರತೀಯ ಔಷಧ ವಿಜ್ಞಾನ ಪರಿಷತ್ತು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ರಾಷ್ಟ್ರೀಯ ಮೌಲ್ಯಮಾಪನ ಮತ್ತು ಅಧಿಮಾನ್ಯತಾ ಪರಿಷತ್ತು, ರಾಷ್ಟ್ರೀಯ ಬೋಧಕ ಶಿಕ್ಷಣ ಪರಿಷತ್ತು, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತುಗಳಂಥವುಗಳು ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವುದಕ್ಕಾಗಿ ಹಾಗೂ ಗುಣಮಟ್ಟಗಳು ಮತ್ತು ಷರತ್ತುಗಳನ್ನು ವಿಧಿಸುವುದಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿರುವ ಒಂದು ಸಂಸ್ಥೆ ಮತ್ತು ಇದರಲ್ಲಿ ಸರ್ಕಾರವೂ ಸೇರಿರುತ್ತದೆ;

(ಎಲ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದಡಿಯಲ್ಲಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಒಂದು ಘಟಕ ಕಾಲೇಜಿಗೆ ಸಂಬಂಧಪಟ್ಟಂತೆ ಪ್ರಾಂಶುಪಾಲರು" ಎಂದರೆ, ಘಟಕ ಕಾಲೇಜಿನ ಮುಖ್ಯಸ್ಥರು ಮತ್ತು ಪ್ರಾಂಶುಪಾಲರು ಇಲ್ಲದಿದ್ದಲ್ಲಿ ಅಥವಾ ನೇಮಕವಾದ ಪ್ರಾಂಶುಪಾಲರ ಗೈರುಹಾಜರಿಯಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಲು ತಾತ್ಕಾಲಿಕವಾಗಿ ನೇಮಕಗೊಂಡಿರುವ ಉಪಪ್ರಾಂಶುಪಾಲರು ಅಥವಾ ಯಾವೊಬ್ಬ ಇತರ ವ್ಯಕ್ತಿಯೂ ಇದರಲ್ಲಿ ಒಳಗೊಳ್ಳುತ್ತಾರೆ;

(ಎನ್) "ಕುಲಸಚಿವರು" ಎಂದರೆ, ವಿಶ್ವವಿದ್ಯಾಲಯದ ಕುಲಸಚಿವರು;

(ಒ) "ಪ್ರಾದೇಶಿಕ ಕೇಂದ್ರ" ಎಂದರೆ, ಯಾವುದೇ ಪ್ರದೇಶದಲ್ಲಿನ ಅಧ್ಯಯನ ಕೇಂದ್ರಗಳ ಕಾರ್ಯವನ್ನು ಸಮನ್ವಯಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಮತ್ತು ಅಂಥ ಕೇಂದ್ರಕ್ಕೆ ಕಾರ್ಯನಿರ್ವಹಣಾ ಪರಿಷತ್ತು ವಹಿಸಿಕೊಡಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸಿಕೊಂಡುಬರುವ ಒಂದು ಕೇಂದ್ರ;

(ಪಿ) ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ "ಪ್ರಾಯೋಜಕ ಪ್ರಾಧಿಕಾರ" ಅಥವಾ "ಪ್ರಾಯೋಜಕ ಸಂಸ್ಥೆ" ಎಂದರೆ, ಸದರಿ ಪ್ರಾಯೋಜಕ ಸಂಸ್ಥೆ;

(ಕ್ಯೂ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ;

(ಆರ್) "ಪರಿನಿಯಮಗಳು" ಮತ್ತು "ವಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಅನುಕ್ರಮವಾಗಿ ವಿಶ್ವವಿದ್ಯಾಲಯದ ಪರಿನಿಯಮಗಳು ಮತ್ತು ವಿನಿಯಮಗಳು;

(ಎಸ್) "ಅಧ್ಯಯನ ಕೇಂದ್ರ" ಎಂದರೆ, ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾರ್ಗದರ್ಶನ ಮಾಡುವ, ಸಲಹೆಗಳನ್ನು ನೀಡುವ ಅಥವಾ ಇತರ ಯಾವುದೇ ನೆರವನ್ನು ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯವು ಸ್ಥಾಪಿಸಿದ ಮತ್ತು ನಿರ್ವಹಿಸಿಕೊಂಡುಬಂದ ಒಂದು ಕೇಂದ್ರ;

(ಟಿ) "ಅಧ್ಯಾಪಕರು" ಎಂದರೆ, ಒಬ್ಬ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಅಡ್‌ಜಂಕ್ಟ್ ಪ್ರಾಧ್ಯಾಪಕರು ಅಥವಾ ವಿಶ್ವವಿದ್ಯಾಲಯದಲ್ಲಿ ಅಥವಾ ಒಂದು ಘಟಕ ಕಾಲೇಜಿನಲ್ಲಿ ಬೋಧಿಸುವುದಕ್ಕೆ ಅಥವಾ ಸಂಶೋಧನೆ ನಡೆಸುವುದಕ್ಕೆ ಅಥವಾ ಸಂಶೋಧನೆಗೆ ಮಾರ್ಗದರ್ಶನ ನೀಡುವುದಕ್ಕೆ ನೇಮಕವಾದ ಅಂಥ ಇತರ ವ್ಯಕ್ತಿ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗವು ನಿರ್ದಿಷ್ಟಪಡಿಸಿದ ಗುಣಮಟ್ಟಗಳಿಗೆ ಅನುಸಾರವಾಗಿ ಇರುವ ಘಟಕ ಕಾಲೇಜಿನ ಪ್ರಾಂಶುಪಾಲರು ಇದರಲ್ಲಿ ಒಳಗೊಳ್ಳುತ್ತಾರೆ;

(ಯು) "ನ್ಯಾಸ" ಎಂದರೆ ಭಾರತೀಯ ನ್ಯಾಸ ಅಧಿನಿಯಮ, 1882ರ ಅಡಿಯಲ್ಲಿ ನೋಂದಣಿಯಾದ ಸಿ.ಎಂ.ಆರ್. ಜ್ಞಾನಧಾರ ನ್ಯಾಸ;

(ವಿ) "ವಿಶ್ವವಿದ್ಯಾಲಯ ಅನುದಾನಗಳ ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) 4ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ;

(ಡಬ್ಲ್ಯೂ) "ವಿಶ್ವವಿದ್ಯಾಲಯ" ಎಂದರೆ, ಈ ಅಧಿನಿಯಮದಡಿಯಲ್ಲಿ ಸ್ಥಾಪಿಸಿ ನಿಗಮಿತಗೊಳಿಸಲಾದ ಸಿ.ಎಂ.ಆರ್. ವಿಶ್ವವಿದ್ಯಾಲಯ;

(ಎಕ್ಸ್) "ಸಂದರ್ಶಕರು" ಎಂದರೆ, 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಸಂದರ್ಶಕರು.

ಅಧ್ಯಾಯ– II

ವಿಶ್ವವಿದ್ಯಾಲಯ ಮತ್ತು ಪ್ರಾಯೋಜಕ ಸಂಸ್ಥೆ

3. ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರಸ್ತಾವ.– (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಅದಕ್ಕನುಸಾರವಾಗಿ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಹಕ್ಕನ್ನು ನ್ಯಾಸವು ಹೊಂದಿರತಕ್ಕದ್ದು.

(2) ನ್ಯಾಸವು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವವನ್ನು ಸಲ್ಲಿಸತಕ್ಕದ್ದು.

(3) ಪ್ರಸ್ತಾವವು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ನ್ಯಾಸದ ವಿವರಗಳೊಂದಿಗೆ ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು;

(ii) ವಿಶ್ವವಿದ್ಯಾಲಯದ ವ್ಯಾಪ್ತಿ ಮತ್ತು ಸ್ಥಾನಮಾನ ಹಾಗೂ ಭೂಮಿಯ ಲಭ್ಯತೆ;

(iii) ಪ್ರಾರಂಭದ ದಿನಾಂಕದಿಂದ ನಿಕಟ ಐದು ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳಬೇಕೆಂದಿರುವ ಅಧ್ಯಯನ ಮತ್ತು ಸಂಶೋಧನಾ ಕಾರ್ಯಕ್ರಮಗಳ ಸ್ವರೂಪ ಮತ್ತು ಬಗೆಗಳು;

(iv) ಪ್ರಾರಂಭಿಸಬೇಕೆಂದು ಪ್ರಸ್ತಾಪಿಸಿರುವ ವ್ಯಾಸಂಗ ವಿಭಾಗಗಳು (ಫ್ಯಾಕಲ್ಟಿಗಳು), ಅಧ್ಯಯನ ಕ್ರಮಗಳು ಮತ್ತು ಸಂಶೋಧನೆಗಳ ಸ್ವರೂಪ;

(v) ಕಟ್ಟಡಗಳು, ಸಲಕರಣೆಗಳು ಮತ್ತು ರಚನಾ ಸೌಕರ್ಯಗಳನ್ನು ಒದಗಿಸುವಂಥ ಕ್ಯಾಂಪಸ್ ಅಭಿವೃದ್ಧಿ;

(vi) ಪ್ರಾರಂಭದ ದಿನಾಂಕದ ನಿಕಟ ಐದು ಶೈಕ್ಷಣಿಕ ವರ್ಷಗಳ ಅವಧಿಗಾಗಿ ಬಂಡವಾಳ ವೆಚ್ಚದ ಹಂತಗಳು;

(vii) ಬಾಬುವಾರು ಆವರ್ತಕ ವೆಚ್ಚ, ಆರ್ಥಿಕ ಮೂಲಗಳು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಅಂದಾಜು ವೆಚ್ಚ;

(viii) ಸಂಪನ್ಮೂಲ ಸಂಗ್ರಹಣೆಗಾಗಿ ಯೋಜನೆ ಮತ್ತು ಅದಕ್ಕೆ ಬಂಡವಾಳದಿಂದ ತಗಲುವ ವೆಚ್ಚ ಹಾಗೂ ಪ್ರತಿಯೊಂದು ಮೂಲಕ್ಕೂ ಮರು ಸಂದಾಯ ಮಾಡುವ ರೀತಿ;

(ix) ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡಿ ಆಂತರಿಕವಾಗಿ ನಿಧಿ ಸಂಗ್ರಹಿಸುವ ಯೋಜನೆ, ಸಲಹಾ ಸೇವೆ ಮತ್ತು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದ ಇತರ ಚಟುವಟಿಕೆಗಳಿಂದ ನಿರೀಕ್ಷಿತ ವರಮಾನಗಳು ಮತ್ತು ಇತರ ನಿರೀಕ್ಷಿತ ವರಮಾನಗಳು;

(x) ಘಟಕವೊಂದಕ್ಕೆ ತಗಲುವ ವೆಚ್ಚದ ವಿವರಗಳು, ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕ, ಉಚಿತ ಶಿಕ್ಷಣ (ಫ್ರೀಶಿಪ್) ಮತ್ತು ವಿದ್ಯಾರ್ಥಿ ವೇತನದಲ್ಲಿ ನೀಡುವ ರಿಯಾಯಿತಿ ಅಥವಾ ವಿನಾಯತಿಯ ಪರಿಮಿತಿಯ ವಿವರಗಳನ್ನು ಮತ್ತು ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳಿಗೆ ಅಥವಾ ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳು ಪ್ರಾಯೋಜಿಸಿದ ವಿದ್ಯಾರ್ಥಿಗಳಿಗೆ ಮತ್ತು ಭಾರತವನ್ನುಳಿದು ಇತರ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ವಿಧಿಸತಕ್ಕ ಶುಲ್ಕದ ದರಗಳು ಬೇರೆ ಬೇರೆ ಇದ್ದಲ್ಲಿ ಅವುಗಳನ್ನು ಸೂಚಿಸುವ ಶುಲ್ಕ ರಚನೆಯ ವಿವರಗಳು;

(xi) ಸಂಬಂಧಪಟ್ಟ ವಿದ್ಯಾ ವಿಭಾಗದಲ್ಲಿ ಎಷ್ಟು ವರ್ಷಗಳ ಅನುಭವ ಮತ್ತು ಪರಿಣತಿಯನ್ನು ನ್ಯಾಸವು ದೊರಕಿಸಿಕೊಡಲಿದೆ ಹಾಗೂ ಅದರ ಹಣಕಾಸಿನ ಸಂಪನ್ಮೂಲಗಳು;

(xii) ವಿಶ್ವವಿದ್ಯಾಲಯದಲ್ಲಿರುವ ಅಧ್ಯಯನ ಕ್ರಮಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಇರುವ ವ್ಯವಸ್ಥೆ; ಮತ್ತು

(xiii) ವಿಶ್ವವಿದ್ಯಾಲಯವು ಸ್ಥಾಪನೆಯಾಗುವುದಕ್ಕೆ ಮೊದಲು ನೆರವೇರಿಸಬೇಕೆಂದು ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದ ಅಂಥ ಇತರ ಷರತ್ತುಗಳ ನೆರವೇರಿಕೆಯ ಹಂತ.

(4) ಸ್ವೀಕರಿಸಿದ ಪ್ರಸ್ತಾವಗಳನ್ನು ಪರೀಕ್ಷಿಸಲು ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪದನಿಮಿತ್ತ ಸದಸ್ಯರಾದ ಮೂವರು ಸದಸ್ಯರುಗಳನ್ನು ಒಳಗೊಂಡ ಒಂದು ಪರಿಶೋಧನಾ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅದು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡತಕ್ಕದ್ದು.

4. ವಿಶ್ವವಿದ್ಯಾಲಯದ ಸ್ಥಾಪನೆ.– (1) ರಾಜ್ಯ ಸರ್ಕಾರವು, ಪರಿಶೋಧನಾ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿದ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ,–

(i) ನ್ಯಾಸವು ಸಾಕಷ್ಟು ಮೂಲ ಸೌಕರ್ಯಗಳನ್ನು ಹೊಂದಿದ್ದು, ಒಂದು ವಿಶ್ವವಿದ್ಯಾಲಯವನ್ನು ನಡೆಸಲು ಸಮರ್ಥವಾಗಿದೆ ಎಂದು ಅದು ಮನಗಂಡರೆ;

(ii) ಪ್ರದೇಶಕ್ಕನುಸಾರವಾಗಿ ಕೆಳಗೆ ನಿರ್ದಿಷ್ಟಪಡಿಸಿದ ವ್ಯಾಪ್ತಿಗೆ ಭೂಮಿಯ ಒಡೆತನವನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಭೂಮಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಿತಿಯೊಳಗಿದ್ದರೆ ಇಪ್ಪತ್ತೈದು ಎಕರೆಗಳು;

(ಬಿ) ಭೂಮಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಿತಿಯಿಂದ ಹೊರಗೆ ಇದ್ದು ಆದರೆ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಪ್ರದೇಶದೊಳಗೆ ಇದ್ದರೆ ನಲವತ್ತು ಎಕರೆಗಳು;

(ಸಿ) ಭೂಮಿಯ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಸ್ಥಳಗಳನ್ನು ಹೊರತುಪಡಿಸಿದ್ದರೆ ಅರವತ್ತು ಎಕರೆಗಿಂತ ಕಡಿಮೆ ಇರತಕ್ಕದ್ದಲ್ಲ.

ಮೇಲೆ ನಿರ್ದಿಷ್ಟಪಡಿಸಿರುವ ಭೂಮಿಯು ಏಕ ಘಟಕ (ಸಿಂಗಲ್ ಬ್ಲಾಕ್)ದಲ್ಲಿರತಕ್ಕದ್ದು ಮತ್ತು ಅದು ಸಂಬಂಧಪಟ್ಟ ನ್ಯಾಸ/ಪ್ರತಿಷ್ಠಾನ/ಸಂಸ್ಥೆ/ವಿಶ್ವವಿದ್ಯಾಲಯದ ಹೆಸರಿನಲ್ಲಿಯೇ ಇರತಕ್ಕದ್ದು. 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ಒದಗಿಸಿರುವ ವಿವರಗಳ ಆಧಾರದ ಮೇಲೆ, 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸಲು ನ್ಯಾಸಕ್ಕೆ ಸರ್ಕಾರವು ನಿರ್ದೇಶಿಸಬಹುದು.

(2) ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಸ್ಥಾಪನೆಯ ತರುವಾಯ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಸಿಎಂಆರ್ ವಿಶ್ವವಿದ್ಯಾಲಯ" ಎಂಬ ಹೆಸರಿನ ಏಕಾತ್ಮಕ ಸ್ವರೂಪದ ಒಂದು ವಿಶ್ವವಿದ್ಯಾಲಯವನ್ನು ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಮಂಜೂರಾತಿಯನ್ನು ನೀಡಬಹುದು.

(3) ವಿಶ್ವವಿದ್ಯಾಲಯದ ಕೇಂದ್ರಕಾರ್ಯಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು. ರಾಜ್ಯ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಳ್ಳುವುದಕ್ಕೊಳಪಟ್ಟು ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಗುಣಮಟ್ಟಗಳಿಗನುಸಾರವಾಗಿ ವಿಶ್ವವಿದ್ಯಾಲಯವು ತನ್ನ ಕ್ಯಾಂಪಸ್ಸುಗಳನ್ನು ಅಥವಾ ಪ್ರಾದೇಶಿಕ ಕೇಂದ್ರಗಳನ್ನು, ಅಧ್ಯಯನ ಕೇಂದ್ರಗಳನ್ನು ಕರ್ನಾಟಕದ ಯಾವುದೇ ಭಾಗದಲ್ಲಿ ಹೊಂದಿರತಕ್ಕದ್ದು.

(4) ಮೊದಲ ಕುಲಾಧಿಪತಿಯವರು, ಮೊದಲ ಸಹಕುಲಾಧಿಪತಿಯವರು, ಮೊದಲ ಕುಲಪತಿಯವರು, ಮೊದಲ ಸಹಕುಲಪತಿಯವರು, ಪ್ರಬಂಧಕ ಮಂಡಳಿಯ ಮೊದಲ ಸದಸ್ಯರುಗಳು, ಕಾರ್ಯನಿರ್ವಹಣಾ ಪರಿಷತ್ತಿನ ಹಾಗೂ ಶೈಕ್ಷಣಿಕ ಪರಿಷತ್ತಿನ ಮೊದಲ ಸದಸ್ಯರುಗಳು ಮತ್ತು ಇನ್ನು ಮುಂದೆ, ಅಂಥ ಅಧಿಕಾರಿಗಳು ಅಥವಾ ಸದಸ್ಯರುಗಳಾಗಬಹುದಾದಂಥ ಎಲ್ಲಾ ವ್ಯಕ್ತಿಗಳು, ಅಂಥ ಪದ ಅಥವಾ ಸದಸ್ಯತ್ವವನ್ನು ಹೊಂದಿರುವುದು ಮುಂದುವರೆಯುವವರೆಗೆ, ಒಂದು ನಿಗಮಿತ ನಿಕಾಯವನ್ನು ರಚಿಸತಕ್ಕದ್ದು ಮತ್ತು ಅದು ವಿಶ್ವವಿದ್ಯಾಲಯದ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೊಳಗಾಗಬಹುದು.

(5) (2)ನೇ ಉಪಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆಗೆ ಮಂಜೂರಾತಿ ದೊರೆತ ಮೇಲೆ, ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ, ನ್ಯಾಸವು ಆರ್ಜಿಸಿದ, ಸೃಜಿಸಿದ, ಏರ್ಪಾಟು ಮಾಡಿಕೊಂಡ ಅಥವಾ ಕಟ್ಟಲ್ಪಟ್ಟ ಭೂಮಿ ಮತ್ತು ಇತರ ಚರ ಮತ್ತು ಸ್ಥಿರ ಸ್ವತ್ತು, ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರತಕ್ಕದ್ದು.

(6) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(7) ವಿಶ್ವವಿದ್ಯಾಲಯದಲ್ಲಿನ ಭೂಮಿ, ಕಟ್ಟಡ ಮತ್ತು ಇತರ ಸ್ವತ್ತುಗಳನ್ನು ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಆನುಷಂಗಿಕವಾಗಿರುವುದನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

5. ಅನುದಾನಗಳು ಮತ್ತು ಹಣಕಾಸು ನೆರವು.– ವಿಶ್ವವಿದ್ಯಾಲಯವು ಸ್ವಂತ ಧನಮೂಲ ಉಳ್ಳದ್ದಾಗಿರತಕ್ಕದ್ದು ಮತ್ತು ರಾಜ್ಯದಿಂದ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ಸಂಸ್ಥೆ ಅಥವಾ ನಿಗಮದಿಂದ ಯಾವುದೇ ನಿರ್ವಹಣಾ ಸಹಾಯ ಅನುದಾನ ಅಥವಾ ಯಾವುದೇ ಹಣಕಾಸು ನೆರವನ್ನು ಹಕ್ಕಿನಿಂದ ಕೇಳತಕ್ಕದ್ದಲ್ಲ ಅಥವಾ ಅದನ್ನು ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದಲ್ಲ:

ಪರಂತು, ರಾಜ್ಯವು,–

(ಎ) ಇತರ ರಾಜ್ಯ ಸರ್ಕಾರದ ಸಂಘಟನೆಗಳಿಗೆ ಹಣಕಾಸು ನೆರವನ್ನು ಒದಗಿಸುತ್ತಿರುವಂಥದ್ದೇ ಸಂಶೋಧನೆ, ಅಭಿವೃದ್ಧಿ ಮತ್ತಿತರ ಚಟುವಟಿಕೆಗಳಿಗಾಗಿ; ಅಥವಾ

(ಬಿ) ಸರ್ಕಾರದಿಂದ ನೆರವನ್ನು ಪಡೆಯುವ ಯಾವುದೇ ನಿರ್ದಿಷ್ಟ ಸಂಶೋಧನೆ ಅಥವಾ ಕಾರ್ಯಕ್ರಮಗಳಿಗಾಗಿ; ಮತ್ತು

(ಸಿ) ರಾಜ್ಯ ಕಾರ್ಯನೀತಿಯ ಬದಲಾವಣೆಗೆ ಒಳಪಟ್ಟು ಅಥವಾ ಅನ್ಯಥಾ ಇದೇ ಬಗೆಯ ವಿಶ್ವವಿದ್ಯಾಲಯಗಳಿಗಾಗಿ ಅಥವಾ ಅವುಗಳ ಪ್ರಯೋಜನಕ್ಕಾಗಿ,

–ಅನುದಾನದ ಮೂಲಕ ಅಥವಾ ಅನ್ಯಥಾ ಹಣಕಾಸು ಬೆಂಬಲವನ್ನು ಒದಗಿಸಬಹುದು:

ಪರಂತು, ವಿಶ್ವವಿದ್ಯಾಲಯವು, ಯಾವುದೇ ಇತರ ಮೂಲದಿಂದ ಯಾವುದೇ ಆರ್ಥಿಕ ನೆರವನ್ನು ಸ್ವೀಕರಿಸಬಹುದು.

6. ಘಟಕ ಕಾಲೇಜು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ.– ವಿಶ್ವವಿದ್ಯಾಲಯದ ಸ್ಥಾಪನೆಯ ತರುವಾಯ ಐದು ವರ್ಷಗಳು ಪೂರ್ಣಗೊಂಡ ಮೇಲೆ, ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು, ಹೆಚ್ಚುವರಿ ಕ್ಯಾಂಪಸ್‌ಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು.

7. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.– ವಿಶ್ವವಿದ್ಯಾಲಯವು, ತನ್ನ ಭವಿಷ್ಯದದೃಷ್ಟಿ ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ಈ ಮುಂದಿನಂತೆ ವಿವಿಧ ಬಗೆಯ ಕಾರ್ಯತಂತ್ರಗಳನ್ನು ಕೈಗೊಳ್ಳಬಹುದು:–

(i) ತಾಂತ್ರಿಕತೆ, ಆರೋಗ್ಯ, ವ್ಯವಸ್ಥಾಪನೆ, ಜೀವ ವಿಜ್ಞಾನಗಳು ಮತ್ತು ಸಂಬಂಧಿತ ವಲಯಗಳಲ್ಲಿ ಸ್ನಾತಕೋತ್ತರ, ಡಾಕ್ಟೊರಲ್ ಮತ್ತು ಪೋಸ್ಟ್ ಡಾಕ್ಟೊರಲ್ ಕೋರ್ಸುಗಳಿಗೆ ಮುಂದುವರಿಯುವ ಮತ್ತು ಅವುಗಳನ್ನು ಒಳಗೊಳ್ಳುವ ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಪ್ರಗತಿಯನ್ನು ಮತ್ತು ಅನ್ವೇಷಣೆಯನ್ನು ಬೆಂಬಲಿಸುವುದು, ಪ್ರೋತ್ಸಾಹಿಸುವುದು ಮತ್ತು ಕೈಗೊಳ್ಳುವುದು ಹಾಗೂ ಈ ಕ್ಷೇತ್ರಗಳಲ್ಲಿ ಸಲಹೆಯನ್ನೂ ಒಳಗೊಂಡಂತೆ ಸಂಶೋಧನೆ, ಪ್ರಗತಿ ಮತ್ತು ಪ್ರಸಾರಕ್ಕೆ ಅವಕಾಶವನ್ನು ಕಲ್ಪಿಸುವುದು;

